## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ.

بِسْمِ اللّٰهِ الرَّحْمٰنِ الرَّحِيْمِ   نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ   وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ


**ವರ್ಷ: 04**

**ಕನ್ನಡ ಬದರ್ ವಾರ ಪತ್ರಿಕೆ**
**WEEKLY BADAR QADIAN KANNADA**

**ಸಂಚಿಕೆ: 09**

**ವಾರ್ಷಿಕ ಶುಲ್ಕ ರೂ.600/–**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**02 ಮಾರ್ಚ್ 2023, 02 ಅಮಾನ್ 1402 ಹಿಜರಿ ಶಮ್‌ಸಿ,**
**09 ಶಅ್‌ಬಾನ್ 1444 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا لَا تَخُوْنُوا اللّٰهَ
وَالرَّسُوْلَ وَتَخُوْنُوْۤا اَمٰنٰتِكُمْ
وَاَنْتُمْ تَعْلَمُوْنَ (سورة انفال:28)

**(ಅಲ್–ಅನ್‌ಫಾಲ್: 28)**

**ಅಂದರೆ: ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೂ ಪ್ರವಾದಿಗೂ ವಿಶ್ವಾಸಘಾತ ಮಾಡಬಾರದು. ನೀವು ತಿಳಿದುಕೊಂಡೂ ನಿಮ್ಮ ವಿಶ್ವಸ್ತನಿಧಿಗಳಲ್ಲಿ ವಂಚನೆ ಮಾಡಬೇಡಿರಿ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಮೃತನನ್ನು ಪ್ರಶಂಸಿಸುವುದು

**(1367)** ಹಝ್‌ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ– ಜನರು ಜನಾಝ (ಶವ)ದ ಬಳಿಯಿಂದ ಹೋದರು. ಅವರು ಆ ಶವವನ್ನು ಕಂಡು ಆತನನ್ನು ಹೊಗಳಿದರು, ಆಗ ನಬಿ(ಸ) ಹೇಳಿದರು: ಆತನ್ನು ನೀಡಲಾಯಿತು! ಮತ್ತೆ ಅವರು ಮತ್ತೊಂದು ಶವದ ಬಳಿಯಿಂದ ಹೋದರು, ಆಗ ಅವರು ಆ ಶವವನ್ನು ಕಂಡು ನಿಂದಿಸಿದರು, ನಬಿ ಕರೀಂ(ಸ) ಹೇಳಿದರು: ಆತನನ್ನು ಸಹ ನೀಡಲಾಯಿತು. ಅದಕ್ಕೆ ಹಝ್‌ರತ್ ಉಮರ್ ಬಿನ್ ಖತ್ತಾಬ್(ರ) ಕೇಳಿದರು ಯಾ ರಸೂಲಲ್ಲಹ್ ಏನು ನೀಡಲಾಯಿತು? ನಬಿ(ಸ) ಹೇಳಿದರು: ಯಾರನ್ನು ನೀವು ಪ್ರಶಂಸಿರುವಿರೋ ಅವನ ಮೇಲೆ ಸ್ವರ್ಗ ನಿಶ್ಚಿತವಾಯಿತು ಮತ್ತು ಯಾರನ್ನು ನೀವು ನಿಂದಿಸಿದ್ದೀರಿ, ಅವನ ಮೇಲೆ ನರಕ ನಿಶ್ಚಿತವಾಯಿತು, ನೀವು ಈ ಭೂಮಿಯ ಮೇಲೆ ಸಾಕ್ಷಿಯಾಗಿದ್ದೀರಿ.

**(1368)** ಅಬುಲ್ ಅಸ್ವದ್ ವರದಿ ಮಾಡಿತ್ತಾರೆ– ನಾನು ಮದೀನಕ್ಕೆ ಬಂದಾಗ ಅಲ್ಲಿ ಮಹಾಮಾರಿ ಹರಡಿತ್ತು. ನಾನು ಹಝ್‌ರತ್ ಉಮರ್ ಬಿನ್ ಖತ್ತಾಬ್(ರ)ರವರ ಬಳಿ ಕುಳಿತಿದ್ದೆ. ಅವರ ಬಳಿಯಿಂದ ಒಂದು (ಜನಾಝ) ಶವಯಾತ್ರೆ ಹೊರಡಿತ್ತು, ಆತನನ್ನು ಅವರು ಚನ್ನಾಗಿ ಹೊಗಳಿದರು. ಹಝ್‌ರತ್ ಉಮರ್(ರ) ಹೇಳಿದರು: ಆತನಿಗೆ ನೀಡಲಾಯಿತು! ಇನ್ನೊಂದು ಶವಯಾತ್ರೆ ಹೊರಡಿತ್ತು ಆತನನ್ನು ಸಹ ಹೊಗಳಿದರು, ಹಝ್‌ರತ್ ಉಮರ್(ರ) ಹೇಳಿದರು: ಆತನಿಗೆ ನೀಡಲಾಯಿತು! ಮೂರನೆಯದ್ದೊಂದು ಶವಯಾತ್ರೆ ಹೊರಡಿತ್ತು ಆತನನ್ನು ಕಂಡು ಅವರು ತೆಗಳಿದರು. ಹಝ್‌ರತ್ ಉಮರ್(ರ) ಹೇಳಿದರು: ಆತನಿಗೂ ನೀಡಲಾಯಿತು! ಅಬುಲ್ ಅಸ್ವದ್ ಹೇಳುತ್ತಿದ್ದರು– ನಾನು ಕೇಳಿದೆ ಯಾ ಅಮೀರಲ್ ಮುಮಿನೀನ್ ಏನು ನೀಡಲಾಯಿತು ಎಂದಿದ್ದೀರಿ? ಅದಕ್ಕೆ ಅವರು ಹೇಳಿದರು: ನಾನು ನಬಿ(ಸ) ಹೇಳಿದ್ದನ್ನು ಹೇಳಿರುತ್ತೇನೆ ಯಾವ ಮುಸಲ್ಮಾನನ ಪರವಾಗಿ ನಾಲ್ಕು ಮುಸಲ್ಮಾನರು ಒಳ್ಳೆಯ ಸಾಕ್ಷಿ ನೀಡುವರೋ– ಅಲ್ಲಾಹನು ಅವನನ್ನು ಸ್ವರ್ಗಕ್ಕೆ ಕಳುಹಸುವನು. ನಾವು ಕೇಳಿದೆವು ಮೂವರು ಸಾಕ್ಷಿ ನೀಡಿದರೆ? ಅವರು(ಸ) ನುಡಿದರು: ಅವರು ಸಹ! ನಾವು ಕೇಳಿದೆವು: ಇಬ್ಬರು ಸಾಕ್ಷಿ ನೀಡಿದರೆ– ಅವರು(ಸ) ನುಡಿದರು: ಎರಡು ಆದರು ಸರಿ. ಮತ್ತೆ ನಾವು ಒಬ್ಬರ ಸಾಕ್ಷಿಯ ಬಗ್ಗೆ ಕೇಳಲಿಲ್ಲ. **(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಏಝ್, ಮುದ್ರಣ 2006 ಖಾದಿಯಾನ್)**

## ಅವನು ತಮ್ಮನು ಪ್ರೀತಿಸಬೇಕೆಂದು ಯಾರು ಬಯಸುತ್ತಾರೋ? ಮತ್ತು ತಮ್ಮ ಪ್ರಾರ್ಥನೆಗಳು ವಿನಯಶೀಲತೆಯಿಂದ ಆಕಾಶದೆಡೆಗೆ ಹೋಗಬೇಕೆಂದು ಬಯಸುತ್ತಾರೋ ಅವರು ಧರ್ಮದ ಸೇವಕನಾಗಲು ಸಮರ್ಥನೆಂದು ನಮಗೆ ಭರವಸೆ ನೀಡಲಿ

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಏಕಾಂತತೆಯ ಪ್ರೀತಿ

ಹಝ್‌ರತ್ ಅಖ್ದಸ್ ಅಲೈಹಿಸ್ಸಲಾಮ್ ಏಕಾಂತತೆಯನ್ನು ತುಂಬಾ ಇಷ್ಟಪಡುತ್ತಿದ್ದರು. ಈ ಬಗ್ಗೆ ಅವರು ಹೇಳಿದರು: "ಸರ್ವಶಕ್ತನಾದ ಅಲ್ಲಾಹನು ನನಗೆ ಏಕಾಂತತೆ ಹಾಗೂ ವ್ಯಕ್ತವಾಗುವ ನಡುವೆ ನೀವು ಯಾವುದಕ್ಕೆ ಆದ್ಯತೆ ನೀಡುತ್ತೀರಿ? ಎಂಬ ಆಯ್ಕೆಯ ಅಧಿಕಾರವನ್ನು ನೀಡಿದರೆ. ನಾನು ಏಕಾಂತವನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಎಂದು ಆ ಪವಿತ್ರ ವ್ಯಕ್ತಿಯ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ನನಗೆ ಪ್ರಪಂಚದ ಕ್ಷೇತ್ರಗಳಲ್ಲಿ ಅವನೇ ನನ್ನನ್ನು ಹೊರಗೆ ತಂದಿರುವನು, ನಾನು ಏಕಾಂತದಲ್ಲಿ ಪಡೆಯುವ ಆನಂದವನ್ನು ಸರ್ವಶಕ್ತನಾದ ಅಲ್ಲಾಹನ ಹೊರತು ಯಾರು ಬಲ್ಲನು? ನಾನು ಸುಮಾರು 25 ವರ್ಷಗಳಿಂದ ಏಕಾಂತದಲ್ಲಿ ಕುಳಿತಿದ್ದೇನೆ ಮತ್ತು ಖ್ಯಾತಿಯ ಸಭಾಂಗಣದಲ್ಲಿ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಒಂದು ಕ್ಷಣವೂ ಬಯಸಲಿಲ್ಲ. ನಾನು ಜನರ ನಡುವೆ ಒಟ್ಟಿಗೆ ಕುಳಿತುಕೊಳ್ಳಲು ಬಯಸುವುದಿಲ್ಲ ಆದರೆ ನಾನು ಆಜ್ಞೆಯ ಕಾರಣದಿಂದ ನಿಸ್ಸಹಾಯಕನಾಗಿದ್ದೇನೆ. ಅವರು ಹೇಳಿದರು: ನಾನು ಹೊರಗೆ ಕುಳಿತುಕೊಳ್ಳುತ್ತೇನೆ ಅಥವಾ ವಾಯುವಿಹಾರಕ್ಕಾಗಿ (ವಾಕಿಂಗ್) ಹೋಗುತ್ತೇನೆ ಮತ್ತು ಜನರೊಂದಿಗೆ ಮಾತನಾಡುತ್ತೇನೆ, ಇದೆಲ್ಲವೂ ಸರ್ವಶಕ್ತನಾದ ಅಲ್ಲಾಹನ ಆಜ್ಞೆಯನ್ನು ಪಾಲಿಸುವುದಕ್ಕಾಗಿ."

### ಧರ್ಮಸೇವಕರೇ ನಮ್ಮ ಪ್ರಾರ್ಥನೆಗೆ ಅರ್ಹರು

ಸರ್ವಶಕ್ತನಾದ ಅಲ್ಲಾಹನ ಬೆಂಬಲಕ್ಕಾಗಿ ಯಾರಾದರು ಪೆನ್ನು ಎತ್ತಿಕೊಂಡರೆ ಅಥವಾ ಪ್ರಯತ್ನಿಸಿದರೆ ಹುಝೂರ್‌ರವರು ಅದನ್ನು ತುಂಬಾ ಮೆಚ್ಚುತ್ತಿದ್ದರು. ಈ ಬಗ್ಗೆ ಅವರು ಹೇಳಿದರು:

"ಯಾರಾದರೂ ಧರ್ಮದ ಬೆಂಬಲಕ್ಕಾಗಿ ಒಂದೇ ಒಂದು ಪದವನ್ನು ತೆಗೆದುಕೊಂಡು ನಮಗೆ ನೀಡಿದರೆ ಅದು ನಮಗೆ ಮುತ್ತುಗಳು ಮತ್ತು ಆಭರಣಗಳಿಗಿಂತ ಹೆಚ್ಚು ಅಮೂಲ್ಯವಾಗಿರುತ್ತದೆ. ಯಾವ ವ್ಯಕ್ತಿಯು ನಾವು ಅವನನ್ನು ಪ್ರೀತಿಸಬೇಕೆಂದು ಬಯಸುತ್ತಾನೊ ಮತ್ತು ನಮ್ಮ ಪ್ರಾರ್ಥನೆಗಳು ವಿನಯಶೀಲತೆ ಹಾಗೂ ನೋವಿನಿಂದ ಅವನಿಗಾಗಿ ಆಕಾಶಕ್ಕೆ ಹೋಗಬೇಕೆಂಧಾದರೆ ಆತನು ಧರ್ಮದ ಸೇವಕನಾಗಲು ಸಮರ್ಥನೆಂದು ನಮಗೆ ಭರವಸೆ ನೀಡಲಿ. ಸರ್ವಶಕ್ತನಾದ ಅಲ್ಲಾಹನಿಗಾಗಿ ಮಾತ್ರ ನಾವು ಪ್ರತಿಯೊಂದನ್ನೂ ಪ್ರೀತಿಸುತ್ತೇವೆ ಎಂದು ಅವರು ಪದೇ ಪದೇ ಪ್ರಮಾಣ ಮಾಡಿ ಹೇಳಿದ್ದಾರೆ. ನಮಗೆ ಹೆಂಡತಿ, ಮಕ್ಕಳು, ಸ್ನೇಹಿತರು ಅವರೆಲ್ಲರೊಂದಿಗೆ ನಮ್ಮ ಸಂಬಂಧವೂ ಸರ್ವಶಕ್ತನಾದ ಅಲ್ಲಾಹನಿಗಾಗಿ ಮಾತ್ರ ಆಗಿದೆ.

### ಸ್ನೇಹದ ಒಡಂಬಡಿಕೆಗೆ ವಿನಾಯಿತಿಗಳು

"ನನ್ನ ಧರ್ಮವು ಯಾರು ನನ್ನೊಂದಿಗೆ ಒಮ್ಮೆ ಸ್ನೇಹದ ಒಪ್ಪಂದ ಮಾಡಿಕೊಳ್ಳುತ್ತಾನೆ. ನನಗೆ ಈ ಒಪ್ಪಂದದ ಕುರಿತು ಎಷ್ಟರ ಮಟ್ಟಿಗೆ ವಿನಾಯತಿ ಇರುತ್ತದೆ ಎಂದರೆ ಆತನು ಹೇಗೇ ಇರಲಿ ಅಥವಾ ಆತನು ಏನೇ ಆಗಲಿ, ನಾನು ಅದನ್ನು ಮುರಿಯಲು ಸಾಧ್ಯವಿಲ್ಲ. ಹೌದು ಅವನೇ ಸಂಬಂಧ ಕಡಿದುಕೊಂಡರೆ ನಾವು ಅಸಹಾಯಕರು, ಇಲ್ಲವಾದರೆ ನಮ್ಮ ಧರ್ಮವೇನೆಂದರೆ ನಮ್ಮ ಸ್ನೇಹಿತರಲ್ಲಿ ಯಾರೋ ಒಬ್ಬರು ಮದ್ಯ ಕುಡಿದು ಬಜಾರದಲ್ಲಿ ಬಿದ್ದರೆ ಮತ್ತು ಜನ ಅವನ ಸುತ್ತಮುತ್ತಲು ಸೇರಿಕೊಂಡಿದ್ದರೆ ನಾವು ಆತನನ್ನು ನಿರ್ಭಯವಾಗಿ ಎತ್ತಿಕೊಂಡು ಬರುತ್ತೇವೆ. ಅವರು ಹೇಳಿದರು: ಸ್ನೇಹವು ಅಮೂಲ್ಯವಾದ ರತ್ನವಾಗಿದೆ, ಅದನ್ನು ಸುಲಭವಾಗಿ ವ್ಯರ್ಥ ಮಾಡಬಾರದು ಮತ್ತು ಸ್ನೇಹಿತರಿಂದ ಯಾವುದೇ ಅಹಿತಕರ ಘಟನೆ ನಡೆದರೂ ಅದನ್ನು ನಿರ್ಲಕ್ಷಿಸಿ ಸಹಿಸಿಕೊಳ್ಳಬೇಕು."

**(ಮಲ್‌ಫೂಝಾತ್, ಸಂಪುಟ–1, ಪುಟ–423, ಮುದ್ರಿತ ಖಾದಿಯಾನ್ 2018)**

### ಅಂತಿಮ ವಿಜಯ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## 2022 ರಲ್ಲಿ ತೆಹ್ರೀಕೆ ಜದೀದ್‌ನ ತ್ಯಾಗದಲ್ಲಿ ಜಮಾಅತ್ ಕೊಯಮತ್ತೂರು ಪ್ರಥಮ, ಖಾದಿಯಾನ್ ದ್ವಿತೀಯ ಮತ್ತು ಹೈದರಾಬಾದ್ ತೃತೀಯ ಸ್ಥಾನ ಪಡೆದಿವೆ

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅತಬಿಅ) ಅವರು ದಿನಾಂಕ 4 ನವೆಂಬರ್ 2022 ರಂದು ತೆಹ್ರೀಕೆ ಜದೀದ್‌ನ 88 ನೇ ವರ್ಷದ ಅನುಗ್ರಹದಾಯಕ ಅಂತ್ಯ ಹಾಗೂ 89 ನೇ ವರ್ಷದ ಆರಂಭವನ್ನು ಘೋಷಿಸಿದರು. ಅಲ್ಲಾಹನ ಅನುಗ್ರಹದಿಂದ ತೆಹ್ರೀಕ್-ಎ-ಜದೀದ್‌ನ ಆರ್ಥಿಕ ವ್ಯವಸ್ಥೆಯಲ್ಲಿ, ಪ್ರಪಂಚದಾದ್ಯಂತದ ಅಹ್ಮದಿಯರು 16.4 ಮಿಲಿಯನ್ ಪೌಂಡ್‌ಗಳ ಆರ್ಥಿಕ ತ್ಯಾಗವನ್ನು ಮಾಡಲು ಸಾಧ್ಯವಾಯಿತು. ಇದು ಹಿಂದಿನ ವರ್ಷಕ್ಕಿಂತ ಹನ್ನೊಂದು ಲಕ್ಷ ಪೌಂಡ್‌ಗಳು ಹೆಚ್ಚಾಗಿದೆ. ಅದನ್ನು ಭಾರತೀಯ ರೂಪಾಯಿಗಳಲ್ಲಿ ಪರಿವರ್ತಿಸಿದರೆ, ಈ ಮೊತ್ತವು ಸುಮಾರು ಒಂದು ಬಿಲಿಯನ್ ಅರವತ್ತು ಕೋಟಿ ರೂಪಾಯಿಯಾಗುತ್ತದೆ. ಮತ್ತು ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಅಹ್ಮದಿಯರು 11 ಕೋಟಿ ರೂಪಾಯಿಗಳಿಗಿಂತ ಹೆಚ್ಚು ತ್ಯಾಗ ಮಾಡಿದ್ದಾರೆ. ಜಗತ್ತಿನಲ್ಲಿ ಆರ್ಥಿಕ ಹಿಂಜರಿತದ ನಡುವೆಯೂ ಅಹ್ಮದೀಯರ ಹೆಜ್ಜೆಗಳು ತ್ಯಾಗದಲ್ಲಿ ಮುನ್ನಡೆಯುತ್ತಿರುವಂತೆ ತೋರುತ್ತದೆ. ಅಲ್ಹಮ್ದುಲಿಲ್ಲಾಹ್ ಮತ್ತು ಈ ತ್ಯಾಗವನ್ನು ಜಗತ್ತಿನಲ್ಲಿ ಇಸ್ಲಾಂ ಧರ್ಮವನ್ನು ಹರಡಲು ಮತ್ತು ಪ್ರಾಬಲ್ಯ ಸಾಧಿಸಲು ಪ್ರತಿಯೊಬ್ಬ ಅಹ್ಮದಿಯು ಅತ್ಯಂತ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ, ದಣಿವಿಲ್ಲದೆ, ಬಹಳ ಸಂತೋಷ ಮತ್ತು ವಿಸ್ತರಣೆಯೊಂದಿಗೆ ಮಾಡುತ್ತಿದ್ದಾರೆ. ಮತ್ತು ಇದು ಒಂದು ಅಥವಾ ಎರಡು ವರ್ಷಗಳ ವಿಷಯವಲ್ಲ, ಅಹ್ಮದಿಯರು ಪ್ರತಿ ವರ್ಷ ಈ ತ್ಯಾಗವನ್ನು ಬಹಳ ತಾಳ್ಮೆ ಮತ್ತು ಸ್ವಾತಂತ್ರ್ಯದಿಂದ ಮಾಡುತ್ತಾರೆ ಮತ್ತು ಪ್ರತಿ ವರ್ಷವೂ ತಮ್ಮ ತ್ಯಾಗವನ್ನು ಹೆಚ್ಚಿಸುತ್ತಾರೆ. ಮತ್ತು ಇವು ಸ್ವಯಂಪ್ರೇರಿತ ಚಂದಗಳಾಗಿದ್ದು, ಕಡ್ಡಾಯ ಚಂದವು ಅದರ ಹೊರತಾಗಿರುತ್ತದೆ. ಮತ್ತು ಕಡ್ಡಾಯ ಚಂದ ಎಂದರೆ ಬದ್ಧತೆ ಹೊಂದಿರುವ ಅಹ್ಮದಿಯು ಇಸ್ಲಾಂ ಧರ್ಮಕ್ಕಾಗಿ ಪ್ರತಿ ತಿಂಗಳು ತನ್ನ ಆದಾಯದ ಆರು ಪ್ರತಿಶತವನ್ನು ತ್ಯಾಗ ಮಾಡುತ್ತಾನೆ. ಮತ್ತು ತ್ಯಾಗದಲ್ಲಿ ಒಂದು ಹೆಜ್ಜೆ ಮುಂದೆ ಹೋದ ಅಹ್ಮದಿ ನಂತರ ವಸಿಯ್ಯತ್‌ನ ವ್ಯವಸ್ಥೆಗೆ ಸೇರುತ್ತಾನೆ. ವಸಿಯ್ಯತ್ ವ್ಯವಸ್ಥೆಗೆ ಸೇರುತ್ತಾನೆ ಎಂದರೆ ಅವನು ತನ್ನ ಆದಾಯದ ಹತ್ತು ಪ್ರತಿಶತವನ್ನು ಇಸ್ಲಾಂ ಧರ್ಮದ ಪ್ರಕಟಣೆಗೆ ನೀಡುವುದಾಗಿ ವಾಗ್ದಾನ ನೀಡುತ್ತಾನೆ. ಅವನ ಮರಣದ ನಂತರ ಅವನು ತನ್ನ ಒಟ್ಟು ಆಸ್ತಿಯಲ್ಲಿ ಹತ್ತು ಪ್ರತಿಶತವನ್ನು ಜಮಾಅತ್‌ಗೆ ನೀಡುತ್ತಾನೆ. ಮತ್ತು ಕೆಲವು ಅಹ್ಮದೀಯರು ತಮ್ಮ ಆಸ್ತಿಯ ಮೂರನೇ ಭಾಗವನ್ನು ವಸಿಯ್ಯತ್ ಮಾಡುತ್ತಾರೆ. ಅಲ್ಹಮ್ದುಲಿಲ್ಲಾ ಅಲಾ ಝಾಲಿಕ್. ಇಸ್ಲಾಂ ಧರ್ಮಕ್ಕಾಗಿ ಅಹ್ಮದೀಯರ ಈ ಭವ್ಯವಾದ ತ್ಯಾಗಗಳು ಅಹ್ಮದಿಯಾ ಜಮಾಅತ್‌ನ ಅಧಿಕೃತತೆಗೆ ಪುರಾವೆಯಾಗಿದೆ. ಇಸ್ಲಾಂ ಧರ್ಮಕ್ಕಾಗಿ ಹೆಚ್ಚು ತ್ಯಾಗ ಮಾಡುವ ಯಾವುದೇ ಗುಂಪು ಇದ್ದರೆ, ಅದನ್ನು ಎತ್ತಿ ತೋರಿಸಬೇಕು.

ಆರ್ಥಿಕ ತ್ಯಾಗದ ಪ್ರಾಮುಖ್ಯತೆ ಮತ್ತು ಅನುಗ್ರಹವನ್ನು ಉಲ್ಲೇಖಿಸುತ್ತ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ತಮ್ಮ ಖುತ್‌ಬ ಜುಮುಅದಲ್ಲಿ ಹೀಗೆ ಹೇಳಿದರು:

ಯಾರು ತ್ಯಾಗ ಮಾಡುತ್ತಾರೋ ಅವರಿಗೆ ಅಲ್ಲಾಹನು ಇಹಪರಲೋಕಗಳಲ್ಲಿ ಅನುಗ್ರಹ ನೀಡುತ್ತಾನೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಅಲ್ಲಾಹನು ಸಾಲವಾಗಿ ಏನೂ ಬಾಕಿಯಿರಿಸುವುದಿಲ್ಲ. ಉದಾಹರಣೆಯಾಗಿ ಒಂದೆಡೆ ಅಲ್ಲಾಹನು ಹೇಳುತ್ತಾನೆ:

**ಮಸಲುಲ್ಲಝೀನ ಯುನ್‌ಫಿಖೂನ ಅಮ್ವಾಲಹುಮ್ ಫೀ ಸಬೀಲಿಲ್ಲಾಹಿ ಕಮಸಲಿ ಹಬ್ಬತಿನ್ ಅಂಬತತ್ ಸಬ್‌ಅ ಸನಾಬಿಲ ಫೀ ಕುಲ್ಲಿ ಸುಂಬುಲತಿಮ್ಮಿಅತು ಹಬ್ಬ; ವಲ್ಲಾಹು ಯುಝಾಇಫು ಲಿಮ್ಮೈಯಶಾಉ; ವಲ್ಲಾಹು ವಾಸಿಉನ್ ಅಲೀಮ್** (ಅಲ್‌ಬಖರ: 262) ಅರ್ಥ: ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ವ್ಯಯ ಮಾಡುವವರ ಹೋಲಿಕೆ, ಒಂದು ಧಾನ್ಯ ಏಳು ತೆನೆಗಳನ್ನು ಹೊಂದಿ, ಪ್ರತಿಯೊಂದು ತೆನೆಯಲ್ಲೂ ನೂರು ಕಾಳುಗಳನ್ನು ಉತ್ಪಾದಿಸುವಂತಾಗಿದೆ. ಅಲ್ಲಾಹನು, ತಾನಿಚ್ಛಿಸುವವರಿಗೆ ಇದಕ್ಕಿಂತಲೂ ಅಧಿಕ ಪಟ್ಟು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ.

ಇದಾಗಿದೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಸತ್ಯವಿಶ್ವಾಸಿಗಳ ಉದಾಹರಣೆ. ಯಾವ ವಿಶ್ವಾಸಿಗಳು ನಿಷ್ಠಾವಂತರಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೋ ಅಂತಹ ಜನರು ನೀಡಿದ ಸಾಲವನ್ನು ಅಲ್ಲಾಹನು ಮರುಪಾವತಿ ಮಾಡದೆ ಬಿಟ್ಟುಬಿಡುವುದಿಲ್ಲ. ಅಂತಹ ಜನರಿಗೆ ಇಹ ಪರ ಲೋಕಗಳಲ್ಲಿ ಅಲ್ಲಾಹನು ಪರಿಮಿತಿಯಿಲ್ಲದೆ ಅನುಗ್ರಹ ದಯಪಾಲಿಸುತ್ತಾನೆ. ಈ ಯುಗದಲ್ಲಿ ಅಲ್ಲಾಹನು ಇಸ್ಲಾಮ್ ಧರ್ಮ ಪ್ರಚಾರಕ್ಕೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಹೊಣೆಗಾರಿಕೆ ಏನೆಂದರೆ, ಅವರು ಇಸ್ಲಾಮ್ ಧರ್ಮದ ಪ್ರಚಾರವನ್ನು ಮಾಡುವುದು ಮತ್ತು ಏಕದೇವ ವಿಶ್ವಾಸ (ತೌಹೀದ್) ಸ್ಥಾಪಿಸುವುದು ತಮ್ಮ ಕಡ್ಡಾಯ ಕರ್ತವ್ಯವಾಗಿ ಈಡೇರಿಸಬೇಕಾಗಿದೆ. ನಿಷ್ಠಾವಂತರಾಗಿ ಈ ಹೊಣೆಗಾರಿಕೆಯನ್ನು ಈಡೇರಿಸುವುದಾದರೆ ಅಲ್ಲಾಹನ ಅನುಗ್ರಹಗಳಿಗೆ ಅವರು ವಾರೀಸುದಾರರಾಗುವರು. ಒಂದು ವರದಿಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ನಮಾಝ್, ಉಪವಾಸ ಮತ್ತು ಅಲ್ಲಾಹನ ನಾಮಸ್ಮರಣೆಯು (ಝಿಕ್ರೆ ಇಲಾಹೀ) ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ ಹಣವು 700 ಪಟ್ಟು ವರ್ಧಿಸುತ್ತದೆ. (ಸುನನ್ ಅಬಿ ದಾವೂದ್, ಕಿತಾಬುಲ್ ಜಿಹಾದ್, ಹದೀಸ್-2498)

ಹುಝೂರ್ ಅನ್ವರ್ (ಅತಬಿಅ) ಅವರು ತೆಹ್ರೀಕ್-ಎ-ಜದೀದ್‌ನ ಹೊಸ ವರ್ಷದ ಆರಂಭವನ್ನು ಘೋಷಿಸಿದಾಗ, ಅವರು ಪ್ರಪಂಚದಾದ್ಯಂತದ ಅಹ್ಮದೀಯರ ಆರ್ಥಿಕ ತ್ಯಾಗದ ಅತ್ಯಂತ ನಂಬಿಕೆ-ಸ್ಫೂರ್ತಿದಾಯಕ ಘಟನೆಗಳನ್ನು ವಿವರಿಸುತ್ತಾರೆ. ಹುಝೂರ್ ಅನ್ವರ್(ಅತಬಿಅ) ಅವರು ಭಾರತದಿಂದ ಲಭಿಸಿದ ಎರಡು ಆರ್ಥಿಕ ತ್ಯಾಗದ ನಂಬಿಕೆಯನ್ನು ವೃದ್ಧಿಸುವ ಘಟನೆಗಳನ್ನು ವಿವರಿಸಿದ್ದಾರೆ, ಅದನ್ನು ನಾವು ಕೆಳಗೆ ಪಟ್ಟಿ ಮಾಡುತ್ತೇವೆ. ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು:

ಭಾರತದ ವಕೀಲುಲ್ ಮಾಲ್ ಹೇಳುತ್ತಾರೆ: ಇಲ್ಲಿ ಒಬ್ಬರು ತಹ್‌ರೀಕ್ ಜದೀದ್ ಚಂದ ನೀಡುವುದರಲ್ಲಿ ಮುಂಚೂಣಿಯಲ್ಲಿರುತ್ತಾರೆ. ಅವರೊಂದಿಗೆ ಚಂದವನ್ನು ವರ್ಧಿಸಬೇಕೆಂದು ಹೇಳಿದಾಗ ಅವರು ಕೇಳಿದರು ಎಷ್ಟು ವರ್ಧಿಸಲಿ. ನಿಮಗೆ ಸಾಧ್ಯವಿರುವಷ್ಟು ವರ್ಧಿಸಿರಿ ಎಂದು ಅವರೊಂದಿಗೆ ಹೇಳಲಾಯಿತು. ಆಗ ಅವರು ಹೇಳಿದರು: ಕೇಂದ್ರದ ಪ್ರತಿನಿಧಿಯಾದ ವ್ಯಕ್ತಿ ಸ್ವತಃ ಹೇಳಬೇಕು ಎಷ್ಟು ವರ್ಧಿಸಬೇಕೆಂದು. ಆಗ ಕೇಂದ್ರದ ಪ್ರತಿನಿಧಿ ಹೇಳಿದರು: ಹತ್ತು ಲಕ್ಷ ರೂಪಾಯಿಯಷ್ಟು ವರ್ಧಿಸಿರಿ. ಆ ವ್ಯಕ್ತಿ ಐದು ಲಕ್ಷ ರೂಪಾಯಿ ಚಂದ ಅದರ ಮೊದಲು ನೀಡಿದ್ದರು. ಆದರೂ ಅವರು ವರ್ಧನೆ ಮಾಡಿ ಪಾವತಿ ಸಹ ಮಾಡಿದರು. ಆ ವ್ಯಕ್ತಿ ಹೇಳುತ್ತಾರೆ: ನನ್ನ ಒಂದು ಕಟ್ಟಡದ ರಿಜಿಸ್ಟ್ರೇಶನ್ ಆಗುತ್ತಾ ಇರಲಿಲ್ಲ. ನನಗೆ ಬಹಳ ದೊಡ್ಡ ನಷ್ಟ ಸಂಭವಿಸುವ ಸಾಧ್ಯತೆಗಳಿದ್ದುವು. ಆದರೆ ತಹ್‌ರೀಕ್ ಜದೀದ್ ಚಂದ ವರ್ಧಿಸಿ ನೀಡಿದ ನಂತರ ಕೆಲವು ದಿನಗಳಲ್ಲಿ ಈ ಕೆಲಸ ಈಡೇರಿತು. ಈ ರೀತಿ ಅಲ್ಲಾಹನು ಆ ವ್ಯಕ್ತಿಗೆ ಸ್ಥಗಿತಗೊಂಡ ಕೆಲಸವನ್ನು ಈಡೇರಿಸಿಕೊಟ್ಟು ನಷ್ಟವಾಗದಂತೆ ಮಾಡಿದನು. ಇದರಿಂದ ಸ್ಪಷ್ಟವಾಗುವುದೇನೆಂದರೆ ಅಲ್ಲಾಹನು ಬಡವರು ನೀಡಿದ ಸಾಲವನ್ನೂ ಶ್ರೀಮಂತರು ನೀಡಿದ ಸಾಲವನ್ನೂ ಮರುಪಾವತಿ ಮಾಡದೆ ಇರುವುದಿಲ್ಲ. ಪ್ರತಿಯೊಬ್ಬನಿಗೆ ಅವನು ಅನುಗ್ರಹ ನೀಡುತ್ತಾನೆ.

ಭಾರತದ ವಕೀಲುಲ್ ಮಾಲ್ ಸಾಹಿಬ್ ಹೀಗೆ ಸಹ ಬರೆದಿದ್ದಾರೆ: ಕಾಶ್ಮೀರದ ಒಬ್ಬ ಡಾಕ್ಟರ್ ಶೇರೆ ಕಾಶ್ಮೀರ್ ಯುನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿದ್ದಾರೆ. ಅವರು ತಮ್ಮ ಚಂದ ನೀಡಿದ್ದರು. ಅವರು ಹೇಳುತ್ತಾರೆ: ನನಗೆ ಬಡ್ತಿ ನೀಡಿ ನನ್ನನ್ನು ಚೀಫ್ ಸೈಯನ್‌ಟಿಸ್ಟ್ ಆಗಿ ನೇಮಿಸಲಾಯಿತು. ನನ್ನ ಸಂಬಳ ಸಹ ಅಸಾಧಾರಣವಾಗಿ ವರ್ಧಿಸಲಾಗಿದೆ. ಆ ಕಾರಣದಿಂದ ಅವರು ತಹ್‌ರೀಕ್ ಜದೀದ್ ಚಂದ ಸಹ ವರ್ಧಿಸಿದರು.

ಹುಝೂರ್ ಅನ್ವರ್(ಅತಬಿಅ) ಅವರು ವಿವಿಧ ದೇಶಗಳಲ್ಲಿ ಹೆಚ್ಚು ತ್ಯಾಗ ಮಾಡಿದ ಪ್ರಾಂತ್ಯಗಳು ಮತ್ತು ಹೆಚ್ಚು ತ್ಯಾಗ ಮಾಡಿದ ಜಮಾಅತ್‌ಗಳ ಹೆಸರನ್ನು ಸಹ ಉಲ್ಲೇಖಿಸುತ್ತಾರೆ. ಭಾರತದ ಹತ್ತು ಅತ್ಯಂತ ತ್ಯಾಗ ನೀಡಿದ ರಾಜ್ಯಗಳು ಕೆಳಕಂಡಂತಿವೆ: (1) ಕೇರಳ (2) ತಮಿಳುನಾಡು (3) ಕರ್ನಾಟಕ (4) ಜಮ್ಮು ಮತ್ತು ಕಾಶ್ಮೀರ (5) ತೆಲಂಗಾಣ (6) ಒಡಿಶಾ (7) ಪಂಜಾಬ್ (8) ಬಂಗಾಳ (9) ದೆಹಲಿ (10) ಮಹಾರಾಷ್ಟ್ರ ಮತ್ತು ಭಾರತದಲ್ಲಿ ಹತ್ತು ಅತ್ಯಂತ ತ್ಯಾಗ ಮಾಡಿದ ಜಮಾಅತ್‌ಗಳು ಈ ಕ್ರಮದಲ್ಲಿವೆ. (1) ಕೊಯಮತ್ತೂರು (2) ಖಾದಿಯಾನ್ (3) ಹೈದ್ರಾಬಾದ್ (4) ಕರೋಲೈ (5) ಪಥಪೆರಿಯಮ್ (6) ಕ್ಯಾಲಿಕಟ್ (7) ಬೆಂಗಳೂರು (8) ಮೇಳಪಾಲಂ (9) ಕಲ್ಕತ್ತಾ (10) ಕೇರಂಗ್.

ಹುಝೂರ್ ಅನ್ವರ್ (ಅತಬಿಅ) ಅವರು ಈ ಹೆಸರನ್ನು ಉಲ್ಲೇಖಿಸಿದ್ದ ಕಾರಣ ಆದ್ದರಿಂದ ಪ್ರತಿ ಜಮಾಅತ್‌ಗಳು ಮತ್ತು ಪ್ರಾಂತ್ಯವು ಅವರ ತ್ಯಾಗದ ಬಗ್ಗೆ ತಿಳಿದಿರಬೇಕು ಮತ್ತು ಅವರು ಪರಸ್ಪರ ಮುನ್ನಡೆಯಲು

*(ಪುಟ ಸಂಖ್ಯೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಓ ಅಲ್ಲಾಹನೇ! ಮುಹಮ್ಮದ್(ಸ) ಅಹ್ವಾನಿಸುತ್ತಿರುವ ಮಾರ್ಗ ಸತ್ಯವಾಗಿದ್ದರೆ. ಏಳು ಸಲವೂ ಅವರ ಬಾಣವೇ ಹೊರಬರಲಿ. ನಾನು ಏಳು ಬಾರಿ ಚೀಟುಗಳನ್ನು ಎಳೆದಿದ್ದೇನೆ ಮತ್ತು ಏಳು ಬಾರಿಯೂ ರಸೂಲುಲ್ಲಾಹ್(ಸ) ಅವರ ಬಾಣವೇ ಹೊರಬಂದಿತು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಸಹಾಬಿಗಳಾದ ಹಝ್ರ಼ತ್ ಅಬೂಲುಬಾಬ ಬಿನ್ ಅಬ್ದುಲ್ ಮುಂಧಿ಼ರ್(ರ), ಹಝ್ರ಼ತ್ ಅಬುಝ್ಝ್ಯಾಹ್ ಬಿನ್ ಸಾಬಿತ್ ಬಿನ್ ನೂಮಾನ್(ರ), ಹಝ್ರ಼ತ್ ಅನ್ಸ(ರ), ಹಝ್ರ಼ತ್ ಮರ್‌ಸದ್ ಬಿನ್ ಅಬೀ ಮರ್‌ಸದ್(ರ), ಅಬೂಮರ್‌ಸದ್ ಕನ್ನಾಝ಼್ ಬಿನ್ ಅಲ್‌ಹುಸೈನ್ ಅಲ್‌ಗ಼ನ್‌ವಿ(ರ), ಹಝ್ರ಼ತ್ ಸಲೀತ್ ಬಿನ್ ಖೈಸ್ ಬಿನ್ ಅಮ್ರ್(ರ), ಹಝ್ರ಼ತ್ ಮಜ್‌ಧ಼ರ್ ಬಿನ್ ಝ್ಯಾದ್(ರ), ಹಝ್ರ಼ತ್ ರಫಾ ಬಿನ್ ರಾಫೀ ಬಿನ್ ಮಾಲಿಕ್ ಬಿನ್ ಅಜ್‌ಲಾನ್(ರ), ಹಝ್ರ಼ತ್ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ), ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಅಬ್ದುಲ್ ಅಸದ್(ರ), ಹಝ್ರ಼ತ್ ಖ಼ಲಾದ್ ಬಿನ್ ರಾಫೀ ಅಝ್ಝುರ್‌ಖಿ(ರ), ಹಝ್ರ಼ತ್ ಉಬಾದ್ ಬಿನ್ ಬಶರ್(ರ), ಹಝ್ರ಼ತ್ ಹಾತಿಬ್ ಬಿನ್ ಅಬೀ ಬಲ್‌ತಅ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–01–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ۔ اَلرَّحْمٰنِ الرَّحِيمِ۔ مٰلِكِ يَوْمِ الدِّينِ۔

اِيَّاكَ نَعْبُدُ وَاِيَّاكَ نَسْتَعِينُ۔ اِهْدِنَا الصِّرَاطَ الْمُسْتَقِيمَ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ۔

ಇಂದು ಸಹಾಬಿಯರ ಕುರಿತು ಸ್ವಲ್ಪ ಪ್ರಸ್ತಾಪಿಸುವೆನು. ಮೊದಲ ಪ್ರಸ್ತಾಪ ಹಝ್ರ಼ತ್ ಅಬೂಲುಬಾಬ ಬಿನ್ ಅಬ್ದುಲ್ ಮುಂಧಿ಼ರ್(ರ)ರದ್ದು ಆಗಿದೆ. ಅವರ ಕುರಿತು ಇನ್ನಷ್ಟು ಕೆಲವು ವರದಿಗಳು ಲಭಿಸಿವೆ.

ಅಲ್ಲಾಮ ಇಬ್ನು ಅಬ್ದುಲ್‌ಬರ್ರ್ ತನ್ನ ಗ್ರಂಥವಾದ ಅಲ್‌ಇಸ್ತೀಆಬ್‌ನಲ್ಲಿ ಬರೆಯುತ್ತಾರೆ: **ವಆಖ಼ರೂನಅ್‌ತರಫೂ ಬಿಧು಼ನೂಬಿಹಿಂ ಖ಼ಲತೂ ಅಮಲನ್ ಸಾಲಿಹನ್ ವ ಆಖ಼ರ ಸಯ್ಯಿಅ** (ಅರ್ಥ: ತಮ್ಮ ತಪ್ಪನ್ನು ಒಪ್ಪಿಕೊಂಡ ಇನ್ನು ಕೆಲವರು ಸಹ ಇದ್ದಾರೆ. ಅವರು ಸತ್ಕೃತ್ಯಗಳೊಂದಿಗೆ ಬೇರೆ ಕೆಲವು ದುಷ್ಕೃತ್ಯಗಳನ್ನು ಬೆರೆಸಿರುವವರು.) ಎಂಬ ಪವಿತ್ರ ಖುರ್‌ಆನಿನ ವಚನದ ಬಗ್ಗೆ ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ಹೇಳುತ್ತಾರೆ: ಈ ವಚನದಲ್ಲಿ ತಬೂಕ್ ಯುದ್ಧದಿಂದ ಹಿಂದುಳಿದಿದ್ದ ಅಬೂಲುಬಾಬ(ರ) ಮತ್ತು ಇತರ ಏಳು ವ್ಯಕ್ತಿಗಳ ಕುರಿತು ಪ್ರಸ್ತಾಪಿಸಲಾಗಿದೆ. ಅನಂತರ ಅವರು ಅಲ್ಲಾಹನ ಸನ್ನಿಧಿಯಲ್ಲಿ ಪಶ್ಚಾತ್ತಾಪ ಮಾಡಿದರು ಮತ್ತು ಸ್ವತಃ ತಮ್ಮನ್ನು ಕಂಬದೊಂದಿಗೆ ಕಟ್ಟಿಕೊಂಡರು. ಅವರ ಉತ್ತಮ ಕೃತ್ಯ ಪಶ್ಚಾತ್ತಾಪವಾಗಿತ್ತು ಮತ್ತು ಕೆಟ್ಟ ಕೃತ್ಯ ಜಿಹಾದಿನಿಂದ ಹಿಂದೆ ಉಳಿದದ್ದು ಆಗಿತ್ತು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–4, ಪುಟ–1741, ದಾರುಲ್ ಜೀಲ್ ಬೈರೂತ್)

ಮಜ್‌ಮಅ್ ಬಿನ್ ಜಾರಿಯ ವರದಿ ಮಾಡುತ್ತಾರೆ: ಹಝ್ರ಼ತ್ ಉನೈಸ್ ಬಿನ್ ಖತಾದ(ರ)ರ ಶಹಾದತ್‌ನ ನಂತರ ಅವರ ಪತ್ನಿಯಾದ ಹಝ್ರ಼ತ್ ಖ಼ನ್‌ಸಾ ಬಿನ್ತ್ ಖ಼ುದ್ದಾಮ್‌ರ ವಿವಾಹವನ್ನು ಅವರು ತಂದೆಯು ಮುಝ್ಯೀನ ಗೋತ್ರದ ಒಬ್ಬ ವ್ಯಕ್ತಿಯೊಂದಿಗೆ ನಡೆಸಿದರು. ಅದು ಅವರಿಗೆ ಇಷ್ಟವಿರಲಿಲ್ಲ. ಹಝ್ರತ್ ಖನ್ಸಾ ಬಿನ್ತ್ ಖಿಝಾಮ್(ರ) ರಸೂಲುಲ್ಲಾಹ್(ಸ) ರವರ ಬಳಿ ಬಂದಾಗ ಹಝ್ರ಼ತ್ ಪೈಗಂಬರ್(ಸ) ಅವರ ನಿಕಾಹನ್ನು ವಿಚ್ಛೇದನೆಗೊಳಿಸಿದರು. ಅನಂತರ ಅವರನ್ನು ಹಝ್ರ಼ತ್ ಅಬೂಲುಬಾಬ(ರ) ವಿವಾಹ ಮಾಡಿಕೊಂಡರು. ಅವರಿಂದ ಹಝ್ರ಼ತ್ ಸಾಇಬ್ ಬಿನ್ ಅಬೂಲುಬಾಬ ಜನಿಸಿದರು.
(ಮಾರಿಫತಿಸ್ಸಹಾಬ ಲಿಅಬಿ ನುಐಮ್, ಸಂಪುಟ–1, ಪುಟ–250, ದಾರುಲ್ ವತನ್ ಲಿನ್ನಶರ್)

ಅಬ್ದುಲ್ ಜಬ್ಬಾರ್ ಬಿನ್ ವರ್ದ್ ವರದಿ ಮಾಡುತ್ತಾರೆ ನಾನು ಅಬೀ ಬಿನ್ ಮುಲೈಕ ಅವರಿಂದ ಕೇಳಲ್ಪಟ್ಟೆ ಅವರು ಹೇಳುತ್ತಿದ್ದರು ಅಬ್ದುಲ್ಲಾಹ್ ಬಿನ್ ಅಬೀ ಯಝೀದ್ ಹೇಳುತ್ತಾರೆ: ನಾವು ಹಝ್ರ಼ತ್ ಅಬೂಲುಬಾಬ(ರ)ರ ಜೊತೆಗೆ ಅವರ ಮನೆಗೆ ಹೋದೆವು. ಅಲ್ಲಿ ಹರಿದ ಅಂಗಿಯನ್ನು ಧರಿಸಿದ ಒಬ್ಬ ವ್ಯಕ್ತಿ ಕುಳಿತುಕೊಂಡಿದ್ದರು. ಹಝ್ರ಼ತ್ ಪೈಗಂಬರ್(ಸ)ರಿಂದ ಹೀಗೆ ಆಲಿಸಿದ್ದಾಗಿ ಅವರು ಹೇಳಿದರು: ಯಾವನು ಪವಿತ್ರ ಖುರ್‌ಆನನ್ನು ಇಂಪಾದ ಸ್ವರದಲ್ಲಿ ಪಾರಾಯಣ ಮಾಡುವುದಿಲ್ಲವೋ ಅವನು ನಮ್ಮವನಲ್ಲ. (ಸುನನ್ ಅಬೀ ದಾವೂದ್, ಕಿತಾಬುಲ್ ವಿತರ್, ಹದೀಸ್–1471)

ಮುಂದಿನ ಪ್ರಸ್ತಾಪ ಹಝ್ರ಼ತ್ ಅಬುಝ್ಝ್ಯಾಹ್ ಬಿನ್ ಸಾಬಿತ್ ಬಿನ್ ನೂಮಾನ್(ರ)ರದ್ದು ಆಗಿದೆ. ಒಂದು ವರದಿಯ ಪ್ರಕಾರ ಬದ್ರ್ ಯುದ್ಧದಲ್ಲಿ ಅವರ ಮೊಣಕಾಲಲ್ಲಿ ಕಲ್ಲಿನ ಚೂಪಾದ ಭಾಗದಿಂದ ಗಾಯವಾದ ಕಾರಣದಿಂದ ಅವರಿಗೆ ಮರಳಬೇಕಾಗಿ ಬಂದಿತು. ಆದ್ದರಿಂದ ಹಝ್ರ಼ತ್ ಪೈಗಂಬರ್(ಸ) ಯುದ್ಧ ಸಂಪತ್ತಿನಿಂದ ಒಂದು ಪಾಲನ್ನು ಅವರಿಗಾಗಿ ಇರಿಸಿಕೊಂಡಿದ್ದರು. (ಅಲ್‌ಬಿದಾಯ ವನ್ನಹಾಯ, ಭಾಗ–5, ಪುಟ–252, ಕಿತಾಬುಲ್ ಮಗಾಝಿ ದಾರುಲ್ ಹಿಜರ್ ಬೈರೂತ್ 1997)

ಮುಂದಿನದ್ದು ಹಝ್ರ಼ತ್ ಪೈಗಂಬರ್(ಸ)ರ ಗುಲಾಮರಾದ ಹಝ್ರ಼ತ್ ಅನ್ಸ(ರ)ರ ಪ್ರಸ್ತಾಪವಾಗಿದೆ. ಹಝ್ರತ್ ಅನ್ಸ(ರ)ರವರ ಉಪನಾಮ ಅಬೂಮಸ್ರೂಹ್ ಮತ್ತು ಇನ್ನು ಕೆಲವರ ಪ್ರಕಾರ ಅಬೂ ಮಿಸ್ರಹ್ ಎಂದಾಗಿದೆ. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–1, ಪುಟ–283, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1995) ಹಝ್ರತ್ ಅನ್ಸ(ರ) ಸರಾತ್‌ನಲ್ಲಿ ಜನಿಸಿದರು. ಸರಾತ್ ಯೆಮನ್ ಮತ್ತು ಹಬ್‌ಶದ ಸಮೀಪದ ಒಂದು ಸ್ಥಳವಾಗಿದೆ.
(ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–301, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್) (ರೌಶನ್ ಸಿತಾರೆ, ಸಂಪುಟ–1, ಪುಟ–145)

ಅವರ ವಲಸೆಯ ಬಗ್ಗೆ ಹೀಗೆ ವರದಿಯಾಗಿದೆ ಅವರು ಮದೀನಕ್ಕೆ ವಲಸೆ ಹೋದಾಗ, ಅವರು ಹಝ್ರತ್ ಕುಲ್ಸೂಮ್ ಬಿನ್ತ್ ಹಿದ್ಮ್(ರ) ಅವರ ಬಳಿ ತಂಗಿದ್ದರು ಮತ್ತು ಇನ್ನು ಕೆಲವು ವರದಿಗಳ ಪ್ರಕಾರ ಅವರು ಹಝ್ರತ್ ಸಾಅದ್ ಬಿನ್ ಖೈಸಮಾ(ರ) ಅವರ ಬಳಿ ತಂಗಿದ್ದರು. (ಅತ್ತಬಖಾತುಲ್ ಕುಬಿ ಲಿಇಬ್ನೆ ಸಾಅದ್, ಸಂಪುಟ–3, ಪುಟ–35, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಇಮಾಂ ಝ್ಹ್ರಿ ಹೇಳುತ್ತಾರೆ: ಮಧ್ಯಾಹ್ನದ ನಂತರ ಭೇಟಿಯಾಗುವವರಿಗೆ ಹಝ್ರ಼ತ್ ಪೈಗಂಬರ್(ಸ) ಭೇಟಿಯ ಅನುಮತಿ ಕೊಡುತ್ತಿದ್ದರು. ಈ ಅನುಮತಿಯನ್ನು ಹಝ್ರ಼ತ್ ಪೈಗಂಬರ್(ಸ)ರಿಂದ ಹಝ್ರ಼ತ್ ಅನ್ಸ(ರ) ಪಡೆಯುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಸಂಪುಟ–3, ಪುಟ–36, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲಡಬನಾನ್ 1990)

ಮುಂದಿನದ್ದು ಹಝ್ರ಼ತ್ ಮರ್‌ಸದ್ ಬಿನ್ ಅಬೀ ಮರ್‌ಸದ್(ರ) ಅವರ ಪ್ರಸ್ತಾಪವಾಗಿದೆ. ಇಮ್ರಾನ್ ಬಿನ್ ಮನ್ನಾಹ್ ಹೇಳುತ್ತಾರೆ: ಅಬೂಮರ್‌ಸದ್(ರ) ಮತ್ತು ಅವರ ಪುತ್ರರಾದ ಮರ್‌ಸದ್ ಬಿನ್ ಅಬೀ ಮರ್‌ಸದ್(ರ) ಮದೀನದ ಕಡೆಗೆ ವಲಸೆ ಹೋದಾಗ ಅವರಿಬ್ಬರೂ ಹಝ್ರ಼ತ್ ಕುಲ್ಸೂಮ್ ಬಿನ್ ಹಿದಮ್(ರ)ರ ಬಳಿಯಲ್ಲಿ ತಂಗಿದ್ದರು. ಮುಹಮ್ಮದ್ ಬಿನ್ ಉಮರ್ ಹೇಳುತ್ತಾರೆ: ಅವರು ಉಹದ್ ಯುದ್ಧದಲ್ಲೂ ಭಾಗಿಯಾಗಿದ್ದರು. ರಜೀ ಯುದ್ಧದ ದಿವಸ ಅವರು ಶಹೀದ್ ಆದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಭಾಗ–3, ಪುಟ–35, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರ಼ತ್ ಮರ್‌ಸದ್(ರ)ರವರ ಓರ್ವ ಪುತ್ರ ಉನೈಸ್ ಬಿನ್ ಅಬೀ ಮುರ್‌ಸದ್ ಅಲ್‌ಗನ್‌ವಿ ಅವರ ಬಗ್ಗೆ ತಿಳಿದು ಬರುತ್ತದೆ. ಅವರಿಗೆ ಅನ್ಸ್ ಎಂದು ಸಹ ಕರೆಯಲಾಗುತ್ತಿತ್ತು ಆದರೆ ಉನೈಸ್ ಎಂದು ಸಜವಾಗಿ

ಕರೆಯುತ್ತಿದ್ದರು ಎಂದು ತಿಳಿದುಬರುತ್ತದೆ. ಹಝ್ರತ್ ಮರ್ಸದ್(ರ)ರವರು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಮಕ್ಕದ ವಿಜಯ ಹಾಗೂ ಹುನ್ಯೆನ್ ಯುದ್ಧದಲ್ಲಿ ಭಾಗವಹಿಸಿದ್ದರು. (ಉಸದುಲ್‌ಗಾಬ, ಸಂಪುಟ–1, ಪುಟ–306, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008)

ಇಬ್ನೆ ಹಜರ್ ರವರು ಹಝ್ರತ್ ಮರ್ಸದ್(ರ)ರವರು ಸಫರ್ ತಿಂಗಳು 4 ಹಿಜ್ರಿಯಲ್ಲಿ ಶಹಾದತ್ ಹೊಂದಿದರು ಎಂದು ಹೇಳುತ್ತಾರೆ. (ತಹ್‌ಝೀಬು ತ್ತಹ್‌ಝೀಬ್, ಸಂಪುಟ–6, ಪುಟ–642, ದಾರುಲ್ ಹದೀಸ್ ಖಾಹಿರಃ 2010)

ಮುಂದಿನ ಪ್ರಸ್ತಾಪ ಹಝ್ರತ್ ಅಬೂಮರ್ಸದ್ ಕನ್ನಾಝ್ ಬಿನ್ ಅಲ್‌ಹುಸೈನ್ ಅಲ್‌ಗ಼ನ್‌ವಿ(ರ)ರದ್ದು ಆಗಿದೆ. ಅವರ ಹೆಸರು ಕನ್ನಾಝು ಎಂದಾಗಿದೆ. ಹುಸೈನ್ ಬಿನ್ ಯರ್‌ಬೂ ಅವರ ತಂದೆಯಾಗಿದ್ದರು. ಅವರ ಹೆಸರಿನ ಬಗ್ಗೆ ಭಿನ್ನಭಿಪ್ರಾಯವಿದೆ ಕೆಲವರ ಪ್ರಕಾರ ಅವರ ಹೆಸರು ಕನ್ನಾಝ್ ಬಿನ್ ಹುಸೈನ್ ಮತ್ತು ಕೆಲವರ ಪ್ರಕಾರ ಹುಸೈನ್ ಬಿನ್ ಕನ್ನಾಝ್ ಎಂದಾಗಿದೆ. ಮತ್ತು ಅವರ ಹೆಸರು ಐಮನ್ ಎಂದು ಸಹ ಆಗಿತ್ತು ಆದರೆ ಕನ್ನಾಝ್ ಬಿನ್ ಹುಸೈನ್ ಪ್ರಸಿದ್ಧವಾದ ಹೆಸರಾಗಿತ್ತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್ ಅಸ್ಖಲಾನಿ, ಭಾಗ–7, ಪುಟ–305, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಅಬೂ ಮರ್ಸದ್ ಕನ್ನಾಝ್(ರ) ಮತ್ತು ಹಝ್ರತ್ ಹವ್‌ಝ(ರ) ರವರು ಸಮಪ್ರಾಯದವರೂ ಮತ್ತು ಅವರ ಪ್ರತಿಜ್ಞಾಬದ್ಧರಾಗಿದ್ದರು. ಅವರು(ರ) ಎತ್ತರವಾಗಿದ್ದರು ಮತ್ತು ಅವರ ತಲೆ ಕೂದಲು ಸಮೃದ್ಧವಾಗಿದ್ದವು. (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–34, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಅಬೂಮರ್ಸದ್(ರ) ಮತ್ತು ಅವರ ಪುತ್ರನಾದ ಮರ್ಸದ್(ರ) ಇಬ್ಬರಿಗೂ ಬದ್ರ್ ಯುದ್ಧದಲ್ಲಿ ಪಾಲ್ಗೊಳ್ಳಲು ಸೌಭಾಗ್ಯ ಲಭಿಸಿತ್ತು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಭಾಗ–6, ಪುಟ–276–277, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಅಬೂಮರ್ಸದ್(ರ) ಅವರ ಮೊಮ್ಮಕ್ಕಳಲ್ಲಿ ಒಬ್ಬರಾದ ಹಝ್ರತ್ ಉನ್ಯೆಸ್ ಬಿನ್ ಮರ್ಸದ್ ಕೂಡ ಹಝ್ರತ್ ಪೈಗಂಬರ್(ಸ) ಅವರ ಸಹಾಬಿಯಾಗಿದ್ದರು. ಅವರು ಮಕ್ಕಾ ವಿಜಯದಲ್ಲಿ ಮತ್ತು ಹುನ್ಯೆನ್ ಯುದ್ಧದಲ್ಲಿ ಪೈಗಂಬರ್(ಸ) ಅವರೊಂದಿಗೆ ಜೊತೆಗಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಭಾಗ–1, ಪುಟ–306, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಿಜರೀ 2, ರಬೀಉಲ್ ಅವ್ವಲ್‌ನಲ್ಲಿ ಹಝ್ರತ್ ಪೈಗಂಬರ್(ಸ) 30 ಒಂಟೆ ಸವಾರರಾದ ಮುಹಾಜಿರರ ಒಂದು ಸೈನ್ಯವನ್ನು ತನ್ನ ದೊಡ್ಡಪ್ಪರಾದ ಹಝ್ರತ್ ಹಂಝ ಬಿನ್ ಅಬ್ದುಲ್ ಮುತಲ್ಲಿಬ್(ರ)ರ ನೇತೃತ್ವದಲ್ಲಿ ಮದೀನದ ಪೂರ್ವದಲ್ಲಿರುವ ಸೈಫುಲ್ ಬಹ್‌ರಿನ ಈಸ್ ಕಡೆಗೆ ಕಳುಹಿಸಿದರು. ಹಝ್ರತ್ ಹಮ್‌ಝ ಮತ್ತು ಅವರ ಸೈನ್ಯವು ಅಲ್ಲಿ ಬೇಗ ಬೇಗ ಹೋಗಿ ನೋಡಿದರೆ ಅಲ್ಲಿ ಮಕ್ಕದ ದೊಡ್ಡ ಸರದಾರರಾದ ಅಬೂಜಹಲ್ ಮತ್ತು ಅವನ ಮುನ್ನೂರು ಸವಾರರ ಸೈನ್ಯದೊಂದಿಗೆ ಮುಖಾಮುಖಿಯಾಗಲು ನಿಂತಿದ್ದರು. ಇರು ಪಕ್ಷಗಳ ಸೈನ್ಯಗಳು ಯುದ್ಧಕ್ಕಾಗಿ ಸಾಲಾಗಿ ನಿಂತರು. ಅಷ್ಟರಲ್ಲಿ ಆ ಪ್ರದೇಶದ ಸರದಾರ ಮಜ್‌ದಿ ಬಿನ್ ಅಮ್ರ್ ಅಲ್‌ಜಹ್‌ನಿ ಎಂಬವನು ಇರುಪಕ್ಷಗಳ ನಡುವೆ ಮಾತುಕತೆ ನಡೆಸಿ ಯುದ್ಧ ನಡೆಯುವುದನ್ನು ತಡೆದರು. **ಸರಿಯ ಹಮ್‌ಝ ಬಿನ್ ಅಬ್ದುಲ್ ಮುತಲ್ಲಿಬ್** ಎಂಬ ಹೆಸರಿನಿಂದ ಈ ಯುದ್ಧ ಕಾರ್ಯಾಚರಣೆ ಪ್ರಸಿದ್ಧವಾಗಿದೆ. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–329) ಹಝ್ರತ್ ಅಬೂಮರ್ಸದ್(ರ) ಸಹ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಹಝ್ರತ್ ಪೈಗಂಬರ್(ಸ) ಮೊತ್ತಮೊದಲ ಧ್ವಜವನ್ನು ಹಝ್ರತ್ ಹಂಝ(ರ)ರಿಗೆ ಕಟ್ಟಿಕೊಟ್ಟಿದ್ದರು ಎಂದು ವರದಿಗಳಲ್ಲಿ ಬಂದಿವೆ. ಈ ಕಾರ್ಯಾಚರಣೆಯಲ್ಲಿ ಹಝ್ರತ್ ಹಂಝ(ರ)ರ ಧ್ವಜವನ್ನು ಹಝ್ರತ್ ಮರ್ಸದ್(ರ) ಎತ್ತಿಕೊಂಡಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆಸಾಅದ್, ಭಾಗ–2, ಪುಟ–3–4, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಮುಂದಿನ ಪ್ರಸ್ತಾಪ ಹಝ್ರತ್ ಸಲೀತ್ ಬಿನ್ ಖೈಸ್ ಬಿನ್ ಅಮ್ರ್(ರ)ರದ್ದು ಆಗಿದೆ. ಹಝ್ರತ್ ಸಲೀತ್ ಬಿನ್ ಖೈಸ್ ಬಿನ್ ಅಮ್ರ್(ರ)ರ ಸಂಬಂಧ ಅನ್ಸಾರ್ ಗೋತ್ರವಾದ ಖ಼ಝ್‌ರಜಿನ ಶಾಖೆಯಾದ ಬನೂ ಅದ್ದಿ ಬಿನ್ ನಜ್ಜಾರ್‌ನೊಂದಿಗೆ ಆಗಿತ್ತು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ್, ಸಂಪುಟ–2, ಪುಟ–538, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್) ಹಝ್ರತ್ ಸಲೀತ್(ರ)ರವರ ತಾಯಿಯ ಹೆಸರು ಹಝ್ರತ್ ಝುಗೈಬ ಬಿನ್ತ್ ಝುರಾರ(ರ) ಆಗಿತ್ತು ಅವರು ಹಝ್ರತ್ ಅಸ್‌ಅದ್ ಬಿನ್ ಝುರಾರ(ರ)ರವರ ಸಹೋದರಿಯಾಗಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಸಂಪುಟ–3, ಪುಟ–388, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಖಾಲಿದ್ ಬಿನ್ ವಲೀದ್(ರ)ರವರ ಸಹೋದರ ವಲೀದ್ ಬಿನ್ ವಲೀದ್ ಅವರನ್ನು ಬದರ್ ಯುದ್ಧದಲ್ಲಿ ಹಝ್ರತ್ ಸಲೀತ್ ಬಿನ್ ಖೈಸ್(ರ)ರವರು ಸೆರೆಯಾಳನ್ನಾಗಿ ಮಾಡಿದ್ದರು ಎಂದು ಒಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. (ಇವಸ್ತಾಉಲ್ ಅಸ್ಮಾ, ಸಂಪುಟ–6, ಪುಟ–248, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಮಕ್ಕಾ ವಿಜಯದ ಸಮಯದಲ್ಲಿ ಮತ್ತು ಹುನ್ಯೆನ್ ಯುದ್ಧದ ಸಂದರ್ಭದಲ್ಲಿ ಅನ್ಸಾರಿನ ಗೋತ್ರವಾದ ಬನೂ ಮಾಝುನಿನ ಧ್ವಜ ಹಝ್ರತ್ ಸಲೀತ್ ಬಿನ್ ಖೈಸ್(ರ) ಬಳಿಯಲ್ಲಿತ್ತು. (ಇವಸ್ತಾಉಲ್ ಅಸ್ಮಾ, ಸಂಪುಟ–7, ಪುಟ–168–169, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಅದೇ ರೀತಿ ಹುನ್ಯೆನ್ ಯುದ್ಧದ ಸಂದರ್ಭದಲ್ಲಿ ಬನೂ ಮಾಝುನ್‌ರವರ ಧ್ವಜವು ಹಝ್ರತ್ ಸಲೀತ್(ರ)ರವರ ಬಳಿ ಇತ್ತು.

(ಕಿತಾಬುಲ್ ಮಗಾಝಿ, ಸಂಪುಟ–3, ಪುಟ–896, ಮಕ್ತಬ ಆಲಮುಲ್ ಕುತುಬ್)

ಹದಿಮೂರು ಹಿಜ್ರಿಯಲ್ಲಿ, ಕೆಲವರ ಪ್ರಕಾರ ಹದಿನಾಲ್ಕು ಹಿಜ್ರಿಯ ಆರಂಭದಲ್ಲಿ, ಹಝ್ರತ್ ಉಮರ್(ರ) ಅವರ ಖಲೀಫತ್ ಕಾಲಘಟ್ಟದಲ್ಲಿ ಜಸ್ರ್ ಯುದ್ಧವು ನಡೆಯಿತು. ಈ ಯುದ್ಧವು ಇಂದಿನ ಇರಾಖ್ ಪ್ರದೇಶದಲ್ಲಿ ಮುಸ್ಲಿಮರು ಮತ್ತು ಪರ್ಷಿಯನ್ನರ ನಡುವೆ ನಡೆಯಿತು. ಹಝ್ರತ್ ಅಬುಉಬೈದ್ ಬಿನ್ ಮಸೂದ್ ಸಕ್ಫಿ(ರ) ಈ ಯುದ್ಧದಲ್ಲಿ ಮುಸ್ಲಿಂ ಸೇನೆಯ ಸೇನಾಧಿಪತಿಯಾಗಿದ್ದರು. ಆದ್ದರಿಂದ ಈ ಯುದ್ಧವನ್ನು ಜಿಸ್ರ್ ಅಬಿ ಉಬೈದ್ ಎಂದೂ ಕರೆಯುತ್ತಾರೆ. ಈ ಯುದ್ಧದ ಇತರ ಹೆಸರುಗಳು ಮಾರ್ವಾಹಾ ಯುದ್ಧ, ಇದು ಯುಫ್ರಟಿಸ್ ನದಿಯ ಪಶ್ಚಿಮ ದಂಡೆಯಲ್ಲಿರುವ ಸ್ಥಳದ ಹೆಸರಾಗಿದೆ. ಕುಸ್ಸುನ್ನಾತಿಫ್ ಯುದ್ಧ. ಇದು ಯೂಫ್ರಟಿಸ್ ನದಿಯ ಪೂರ್ವ ದಂಡೆಯಲ್ಲಿರುವ ಕುಫಾ ಬಳಿಯ ಸ್ಥಳದ ಹೆಸರೂ ಆಗಿದೆ. ಈ ಯುದ್ಧದಲ್ಲಿ ಎರಡು ಸಾವಿರ ಇರಾನಿಯನ್ನರು ಕೊಲ್ಲಲ್ಪಟ್ಟರು, ಕೆಲವು ವರದಿಗಳ ಪ್ರಕಾರ, ಆರು ಸಾವಿರ ಇರಾನಿಯನ್ನರು ಕೊಲ್ಲಲ್ಪಟ್ಟರು ಎಂದು ಉಲ್ಲೇಖಿಸಲಾಗಿದೆ. ಮುಸ್ಲಿಮರ ಕಡೆಯಿಂದ ಕೆಲವು ವರದಿಗಳ ಪ್ರಕಾರ, ಹದಿನೆಂಟು ನೂರು ಮುಸ್ಲಿಮರು ಈ ಯುದ್ಧದಲ್ಲಿ ಹುತಾತ್ಮರಾದರು, ಇತರರ ಪ್ರಕಾರ, ಎಪ್ಪತ್ತು ಅನ್ಸಾರ್ ಮತ್ತು ಇಪ್ಪತ್ತೆರಡು ಮುಹಾಜಿರ್‌ಗಳು ಸೇರಿದಂತೆ ನಾಲ್ಕು ಸಾವಿರ ಮುಸ್ಲಿಮರು ಹುತಾತ್ಮರಾದರು. ಈ ಹುತಾತ್ಮರಲ್ಲಿ ಹಝ್ರತ್ ಸಲೀತ್ ಬಿನ್ ಖೈಸ್(ರ) ಕೂಡ ಸೇರಿದ್ದಾರೆ. ಕೆಲವರ ಪ್ರಕಾರ ಹಝ್ರತ್ ಸಲೀತ್ ಬಿನ್ ಖೈಸ್(ರ) ಈ ಯುದ್ಧದಲ್ಲಿ ಕೊನೆಯಲ್ಲಿ ಹುತಾತ್ಮರಾಗಿದ್ದರು. (ಅಲ್–ಇಕ್ತಿಫಾ ಬಿಮಾ ತಝಮ್ಮಲ ಮಿನ್ ಮುಘಾಜಿ ರಸೂಲುಲ್ಲಾ ವಾ ಅಲ್–ಸಲಾಸ್ ಅಲ್–ಖಲೀಫಾ, ಸಂಪುಟ–2, ಭಾಗ–2, ಪುಟಗಳು 124–129, ಆಲಂ ಅಲ್–ಕಿತಾಬ್ ಬೈರೂತ್) (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಸಂಪುಟ–4, ಪುಟ–46, ಮಕ್ತಬ ಅಲ್ ಮುಆರಿಫ್ ಬೈರೂತ್) (ಅಟ್ಲಾಸ್ ಫತೂಹಾತೆ ಇಸ್ಲಾಮಿಯಾ, ಅಹ್ಮದ್ ಆದಿಲ್ ಕಮಾಲ್, ಭಾಗ–2, ಪುಟ–90, ಮಕ್ತಬ ದಾರುಸ್ಸಲಾಮ್) (ಅಲ್‌ಬಿದಾಯ ವನ್ನಹಾಯ, ಸಂಪುಟ–9, ಪುಟ–594, ದಾರುಲ್ ಹಿಜರ್ ಬೈರೂತ್) (ಮುಜಮುಲ್ ಬಲದಾನ್, ಸಂ[ಪುಟ–4, ಪುಟ–349, ದಾರುಸ್ಸಾದಿರ್ ಬೈರೂತ್ ಲೆಬನಾನ್) (ಸೈರ್ ಅಲ್‌ಲಾಮುನ್ನಬ್ಲಾ ಸೈರುಲ್ ಖುಲಫಾ ಅರ್ರಾಶಿದೂನ್, ಪುಟ–100, ಮುಅಸ್ಸಸುರ್ರಿಸಾಲ ಬೈರೂತ್ 1996)

ಕೆಲವು ಇತಿಹಾಸಕಾರರ ಪ್ರಕಾರ, ಅವರ(ರ) ಸಂತಾನವು ಮುಂದೆ ನಡೆಯಲಿಲ್ಲ, ಆದರೆ ಇತರರ ಪ್ರಕಾರ, ಅವರ ಪುತ್ರರ ಹೆಸರು ಅಬ್ದುಲ್ಲಾ ಬಿನ್ ಸಲೀತ್ ಎಂದಾಗಿತ್ತು. ಅವರು ಅವರಿಂದ ಒಂದು ವರದಿಯನ್ನು ಉಲ್ಲೇಖಿಸಿದ್ದಾರೆ. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಸಲೀತ್(ರ) ಅವರಿಗೆ ಸುವೈತ ಎಂಬ ಪುತ್ರಿ ಇದ್ದಳು, ಅವರು ಹಝ್ರತ್ ಸುಖಿಲಾ ಬಿನ್ತ್ ಸಿಮ್ಮಾ(ರ) ಅವರ ಗರ್ಭದಿಂದ ಜನಿಸಿದ್ದರು. ಅಸದ್ ಅಲ್–ಘಾಬಾದ ಲೇಖಕರು ಅವರ ವಂಶಸ್ಥರ ಸಂತಾನವು ಮುಂದುವರೆಯಲಿಲ್ಲ ಎಂದು ಬರೆಯುತ್ತಾರೆ.

ಅಬ್ದುಲ್ಲಾ ಬಿನ್ ಸಲೀತ್ ಬಿನ್ ಖೈಸ್ ಅವರು ತಮ್ಮ ತಂದೆ ಹಝ್ರತ್ ಸಲೀತ್ ಬಿನ್ ಖೈಸ್ ಅವರಿಂದ ವರದಿ ಮಾಡುತ್ತಾರೆ, ಅನ್ಸಾರ್‌ರಲ್ಲಿ ಒಬ್ಬರು ತೋಟವನ್ನು ಹೊಂದಿದ್ದು, ಅದರಲ್ಲಿ ಇನ್ನೊಬ್ಬ ಅನ್ಸಾರಿಗೆ ಸೇರಿದ ಖರ್ಜೂರದ ಮರಗಳಿದ್ದವು ಮತ್ತು ಆ ವ್ಯಕ್ತಿಯು ಬೆಳಿಗ್ಗೆ ಮತ್ತು ಸಂಜೆ ಈ ತೋಟಕ್ಕೆ ಬರುತ್ತಿದ್ದನು. ಹಝ್ರತ್ ಪೈಗಂಬರ್(ಸ)

ಅವರು ತೋಟದ ಗೋಡೆಗೆ ಹೊಂದಿಕೊಂಡಿರುವ ತನ್ನ ಮರಗಳ ಖರ್ಜೂರವನ್ನು ತೋಟದ ಮಾಲೀಕರಾಗಿದ್ದ ಅನ್ಸಾರಿಗೂ ಸಹ ನೀಡಲು ಆದೇಶಿಸಿದರು. (ಉಸದ್ ಅಲ್–ಗಾಬಾ ಫೀ ಮಾರಿಫತ್ ಅಲ್–ಸಹಾಬಾ, ಸಂಪುಟ–2, ಪುಟ–538, ಸಲೀತ್ ಬಿನ್ ಖೈಸ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಸಂಪುಟ–3, ಪುಟ–388, ದರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಮುಂದಿನ ಪ್ರಸ್ತಾಪ ಹಝ್ರತ್ ಮಜ್‌ಧರ್ ಬಿನ್ ಝಿಯಾದ್(ರ)ರದ್ದಾಗಿದೆ. ಹಝ್ರತ್ ಮಜ್‌ಧರ್ ಬಿನ್ ಝಿಯಾದ್(ರ) ಇಸ್ಲಾಮಿನ ಆರ್ವಿಭಾವಕ್ಕೆ ಮುಂಚೆ ಸುವೈದ್ ಬಿನ್ ಸಾಮಿತ್‌ರನ್ನು ವಧಿಸಿದ್ದರು. ನಂತರ ಕಾಲದಲ್ಲಿ ಹಝ್ರತ್ ಮಜ್‌ಧರ್(ರ) ಮತ್ತು ಸುವೈದ್ ಬಿನ್ ಸಾಮಿತಿನ ಪುತ್ರನಾದ ಹಾರಿಸ್ ಇಸ್ಲಾಂ ಸ್ವೀಕಾರ ಮಾಡಿಕೊಂಡರು. ಆದರೆ ಹಾರಿಸ್ ಬಿನ್ ಸುವೈದ್ ತನ್ನ ತಂದೆಯ ಕೊಲೆಯ ಸೇಡು ತೀರಿಸಲಿಕ್ಕಾಗಿ ಸಂದರ್ಭವನ್ನು ಹುಡುಕುತ್ತಿದ್ದರು. ಉಹದ್ ಯುದ್ಧದಲ್ಲಿ ಖುರೈಶಿಯರು ಮರಳಿ ಬಂದು ಮುಸ್ಲಿಮರ ಮೇಲೆ ದಾಳಿ ನಡೆಸಿದಾಗ ಹಾರಿಸ್ ಬಿನ್ ಸುವೈದ್ ಹಿಂದಿನಿಂದ ಹಝ್ರತ್ ಮಜ್‌ಧರ್(ರ)ರ ಕುತ್ತಿಗೆಯ ಮೇಲೆ ಹಲ್ಲೆ ನಡೆಸಿ ಅವರನ್ನು ಶಹೀದ್ ಮಾಡಿದರು. ಹಾರಿಸ್ ಬಿನ್ ಸುವೈದ್ ಮೋಸದಿಂದ ಹಝ್ರತ್ ಮಜ್‌ಧರ್(ರ)ರನ್ನು ವಧಿಸಿರುವನು ಮತ್ತು ಹಾರಿಸ್‌ನನ್ನು ಹಝ್ರತ್ ಮಜ್‌ಧರ್(ರ)ರ ಕೊಲೆಗೆ ಪ್ರತೀಕಾರವಾಗಿ ವಧಿಸಬೇಕೆಂದು ಎಂದು ಹಝ್ರತ್ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಹಝ್ರತ್ ಉವೈಮ್ ಬಿನ್ ಸಾಯಿದ(ರ) ಖುಬಾ ಮಸೀದಿಯ ಬಾಗಿಲ ಬಳಿ ಹಾರಿಸ್ ಬಿನ್ ಸುವೈದ್‌ನನ್ನು ವಧಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಭಾಗ–3, ಪುಟ–283, ದಾರ್ ಅಹ್ಯಾಉತ್ತುರಾಸ್ ಬೈರೂತ್ 1996) (ಅಲ್‌ಅಸಾ ಫೀ ತಮೀಝಿಸ್ಸಹಾಬ, ಭಾಗ–5, ಪುಟ–572–573, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005) (ಇಮ್ತಾಉಲ್ ಅಸ್ಮಾ, ಸಂಪುಟ–10, ಪುಟ–10, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1999)

ಮುಂದಿನದ್ದು ಹಝ್ರತ್ ರಫಾ ಬಿನ್ ರಾಫೀ ಬಿನ್ ಮಾಲಿಕ್ ಬಿನ್ ಅಜ್‌ಲಾನ್(ರ)ರ ಪ್ರಸ್ತಾಪವಾಗಿದೆ. ಹಝ್ರತ್ ರಿಫಾಅ ಬಿನ್ ರಾಫಿ(ರ)ರವರ ಇಲಸ್ಲಾಮ್ ಸ್ವೀಕಾರದ ಘಟನೆಯು ಹೀಗಿದೆ: ರಫಾ ಬಿನ್ ರಾಫೀ ಬಿನ್ ಮಾಲಿಕ್ ಬಿನ್ ಅಜ್‌ಲಾನ್(ರ) ತನ್ನ ಚಿಕ್ಕಮ್ಮನ ಪುತ್ರನಾದ ಮುಆಧ್ ಬಿನ್ ಅಫ್ರಾ(ರ)ರ ಜೊತೆಗೆ ಮಕ್ಕಕ್ಕೆ ತಲುಪಿ ಸನಿಯ ಪರ್ವತದಿಂದ ಕೆಳಗೆ ಇಳಿದಾಗ ಒಬ್ಬ ವ್ಯಕ್ತಿಯನ್ನು ಕಂಡರು. ವರದಿಗಾರರ ಪ್ರಕಾರ ಈ ಘಟನೆಯು 6 ಅನ್ಸಾರಿಗಳು ಹೊರಡುವುದಕ್ಕು ಮುಂಚಡಯುದ್ದಾಗಿದೆ ಅಂದರೆ ಬೈಅತೆ ಉಖಬಾ ಊಲಾದಿಂದ ಮುಂಚೆಯದ್ದು. ಅವರು ಹೇಳುತ್ತಾರೆ ನಾವು ಆ ವ್ಯಕ್ತಿಯನ್ನು ಕಂಡಾಗ ಅವರು ಹಝ್ರತ್ ಪೈಗಂಬರ್(ಸ) ಆಗಿದ್ದರು. ಆಗ ನಾವು ಆ ವ್ಯಕ್ತಿಯ ಬಳಿ ಹೋಗಿ ನಮ್ಮ ಸರಕು ಸಾಮಾನುಗಳನ್ನು ಆತನ ಬಳಿ ಇರಿಸಿ ಬೈತುಲ್ಲಾಹ್‌ದ ತವಾಫ್ ಮಾಡಿ ಬರೋಣ ಎಂದು ಹೇಳಿಕೊಂಡೆವು. ಅವರು ಹೇಳುತ್ತಾರೆ ನಾವು ಹಝ್ರತ್ ಪೈಗಂಬರ್(ಸ) ಅವರನ್ನು ಜಾಹಿಲೀಯತ್‌ನ ಸಂಪ್ರದಾಯದ ಪ್ರಕಾರ ಸಲಾಮ್ ಮಾಡಿದೆವು ಅದಕ್ಕೆ ಅವರು(ಸ) ಅವರಿಗೆ ಇಸ್ಲಾಮಿನ ಸಂಪ್ರದಾಯದ ಪ್ರಕಾರ ಸಲಾಮಿಗೆ ಉತ್ತರಿಸಿದರು ಮತ್ತು ಅವರಿಗೆ ಹಝ್ರತ್ ಪೈಗಂಬರ್(ಸ)ರ ಪರಿಚಯವಿರಲಿಲ್ಲ. ಅದಕ್ಕೆ ನಾವು ಅವರನ್ನು ಕೇಳಿದೆವು, ನೀವು ಯಾರು? ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಕೆಳಗೆ ಇಳಿದು ಬನ್ನಿ ಎಂದರು. ನಾವು ಕೆಳಗೆ ಬಂದು ಪ್ರವಾದಿತ್ವವನ್ನು ಪ್ರತಿಪಾದಿಸುವ ವ್ಯಕ್ತಿ ಎಲ್ಲಿದ್ದಾರೆ ಎಂದು ಕೇಳಿದೆವು ಮತ್ತು ಅವನು ಏನು ಹೇಳುತ್ತಾನೆ? ಅಂದರೆ ಅವನು ಏನು ಹೇಳುತ್ತಾನೆ, ಅವನು ತನ್ನ ವಾದದ ಬಗ್ಗೆ ಏನು ಹೇಳುತ್ತಾನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, ಅದು ನಾನೇ ಆಗಿದ್ದೇನೆ. ತದನಂತರ ನಾವು ಅವರಿಗೆ ನನಗೆ ಇಸ್ಲಾಮಿನ ಬಗ್ಗೆ ಹೇಳಿ ಎಂದು ಕೇಳಿಕೊಂಡೆವು. ನಂತರ ಹಝ್ರತ್ ಪೈಗಂಬರ್(ಸ) ಅವರು ನಮಗೆ ಇಸ್ಲಾಂ ಧರ್ಮದ ಬಗ್ಗೆ ಹೇಳಿದರು ಮತ್ತು ಆಕಾಶ, ಭೂಮಿ ಮತ್ತು ಪರ್ವತಗಳನ್ನು ಸೃಷ್ಟಿಸಿದವರು ಯಾರು? ಎಂದು ಕೇಳಿದರು ಅದಕ್ಕೆ ನಾವು ಅಲ್ಲಾಹನು ಸೃಷ್ಟಿಸಿದ್ದಾನೆ ಎಂದು ಹೇಳಿದೆವು. ತದನಂತರ ಹಝ್ರತ್ ಪೈಗಂಬರ್(ಸ) ಅವರು ನಿಮಗೆ ಸೃಷ್ಟಿಸಿದವನು ಯಾರು? ಎಂದು ಕೇಳಿದಾಗ ನಾವು ಸರ್ವಶಕ್ತನಾದ ಅಲ್ಲಾಹನು ಎಂದು ಹೇಳಿದೆವು. ಅದಕ್ಕೆ ಹಝ್ರತ್ ಪೈಗಂಬರ್(ಸ) ಕೇಳಿದರು, ನೀವು ಪೂಜಿಸುವ ಈ ವಿಗ್ರಹಗಳನ್ನು ಯಾರು ಸೃಷ್ಟಿಸಿದರು? ಅದನ್ನು ನಾವೇ ಸ್ವತಃ ಮಾಡಿದ್ದೇವೆ ಎಂದೆವು. ಹಝ್ರತ್ ಪೈಗಂಬರ್(ಸ) ಕೇಳಿದರು, ಹಾಗಾದರೆ ಸೃಷ್ಟಿಕರ್ತನಿಗೆ ಆರಾಧಿಸಲು ಹೆಚ್ಚು ಹಕ್ಕಿದಿಯೇ ಅಥವಾ ಸೃಷ್ಟಿಸಲ್ಪಟ್ಟವರಿಗೆ ಹೆಚ್ಚು ಹಕ್ಕಿದೆ. ಹಾಗಾದರೆ ನೀವು ವಿಗ್ರಗಳನ್ನು ಸೃಷ್ಠಿಸಿದ್ದೀರಿ ಆದ್ದರಿಂದ ನೀಮನ್ನು ಆರಾಧಿಸಲು ಹೆಚ್ಚು ಅರ್ಹರಾಗಿದ್ದೀರಿ ಎಂದರು ಮತ್ತು ನಂತರ ಅವರು ಹೇಳಿದರು: ನಾನು ಅಲ್ಲಾಹನ ಆರಾಧನೆಗೆ ಮತ್ತು ಅಲ್ಲಾಹನನ್ನು ಹೊರತುಪಡಿಸಿ ಯಾವುದೇ ದೇವರು ಇಲ್ಲ ಎಂದು ಕರೆಯುತ್ತೇನೆ ಮತ್ತು ನಾನು ಸಂದೇಶವಾಹಕನಾಗಿದ್ದೇನೆ ಮತ್ತು ನಾನು ಪರಸ್ಪರ ದಯೆ ಮತ್ತು ಜನರ ದಬ್ಬಾಳಿಕೆಗೆ ಕಾರಣವಾದ ದ್ವೇಷವನ್ನು ಬಿಡಲು ಕರೆಯುತ್ತೇನೆ. ಅದಕ್ಕೆ ನಾವು ಹೇಳಿದೆವು ಇಲ್ಲ ಅಲ್ಲಾಹನಆಣೆ!! ನೀವು ಕರೆದಿರುವುದು ಸುಳ್ಳಾಗಿದ್ದರೂ, ಇವು ಒಳ್ಳೆಯ ವಿಷಯಗಳಾಗಿವೆ ಮತ್ತು ಉತ್ತಮ ನಡವಳಿಕೆಗಳಾಗಿವೆ. ನಾವು ತವಾಫ್ ಮಾಡಿ ಬರುವವರೆಗೆ ನಮ್ಮ ಸವಾರಿಯನ್ನು ನೋಡಿಕೊಳ್ಳಿ. ಮುಆದ್ ಬಿನ್ ಅಫ್ರಾ ಅವರು ರಸೂಲುಲ್ಲಾಹ್(ಸ) ಅವರ ಪಕ್ಕದಲ್ಲಿ ಕುಳಿತುಕೊಂಡರು.

ರಿಫಾ ಬಿನ್ ರಾಫಿ ಹೇಳಿದರು: ನಾನು ಬೈತುಲ್ಲಾಹ್‌ದ ತವಾಫ್ ಮಾಡಲು ಹೊರಟುಹೋದೆ. ನಾನು ಏಳು ಬಾಣಗಳನ್ನು ತೆಗೆದು ರಸೂಲುಲ್ಲಾಹ್(ಸ) ಅವರಿಗೆ ಒಂದು ಬಾಣವನ್ನು ಹಾಕಿದೆ. ಅದು ಅವರ ವಿಧಾನವಾಗಿತ್ತು. ಅವರು ತಮ್ಮ ಹೃದಯವನ್ನು ಸಾಂತ್ವನಗೊಳಿಸಲು ಬಾಣಗಳಿಂದ ಶಕುನಗಳನ್ನು ತೆಗೆದುಕೊಳ್ಳುತ್ತಿದ್ದರು. ನಂತರ ಅವರು ಹೇಳುತ್ತಾರೆ ಬೈತುಲ್ಲಾ ಕಡೆಗೆ ತಿರುಗಿ ಪ್ರಾರ್ಥಿಸಿದರು. ಓ ಅಲ್ಲಾಹನೇ! ಮುಹಮ್ಮದ್(ಸ) ಕರೆದದ್ದು ಸತ್ಯವಾಗಿದ್ದರೆ. ಏಳು ಸಲವೂ ಅವರ ಬಾಣವೇ ಹೊರಬರಲಿ. ನಾನು ಏಳು ಬಾರಿ ಚೀಟುಗಳನ್ನು ಎಳೆದಿದ್ದೇನೆ ಮತ್ತು ಏಳು ಬಾರಿಯೂ ರಸೂಲುಲ್ಲಾಹ್(ಸ) ಅವರ ಬಾಣವೇ ಹೊರಬಂದಿತು.

ಅದಕ್ಕೆ ನಾನು ಜೋರಾಗಿ ಹೇಳಿದೆ. **ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್**. ಅಲ್ಲಾಹನ ಹೊರತುಪಡಿಸಿ ಆರಾಧನೆಗೆ ಯಾವುದೇ ದೇವರು ಇಲ್ಲ ಮತ್ತು ಮುಹಮ್ಮದ್(ಸ) ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷಿ ನೀಡಿದೆ. ಹೀಗಾಗಿ ನನ್ನ ಸುತ್ತ ಜನ ಜಮಾಯಿಸಿ ಈತನಿಗೆ ಹುಚ್ಚು ಹಿಡಿದಿದೆ, ಮಾಠಮಂತ್ರವಾಗಿದೆ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ಬದಲಿಗೆ, ಅವರು ಮುಮಿನ್ ವ್ಯಕ್ತಿ ಆಗಿದ್ದಾರೆ. ಅಂದರೆ ನೀವು ಹೇಳುತ್ತಿರುವವನು ಹುಚ್ಚ ಎಂದಾದರೆ ನಾನು ಇಲ್ಲ ಎಂದು ಹೇಳಿದೆ, ಆದರೆ ಅವನು ಮುಮಿನ್ ವ್ಯಕ್ತಿಯಾಗಿದ್ದಾನೆ ಎಂದು ನಾನು ಭಾವಿಸುತ್ತೇನೆ. ನಂತರ ನಾನು ಮಕ್ಕಾದ ಮೇಲಿನ ಪ್ರದೇಶಕ್ಕೆ ಬಂದೆ. ಮುಆದ್ ನನ್ನನ್ನು ನೋಡಿದಾಗ ಅವರು ಹೇಳಿದರು, ರಿಫಾ ಅವರು ಹೊರಟುಹೋದಾಗ ಬರದಂತಹ ಪ್ರಕಾಶಮಾನವಾದ ಮುಖದಿಂದ ಬರುತ್ತಿದ್ದಾರೆ.

ಅದೇನೆಂದರೆ, ಕಲಿಮವನ್ನು ಪಠಿಸುವ ಮೊದಲು, ಅವರು ಈಗಿನಂತೆ ಪ್ರಕಾಶಮಾನ ಮುಖವಾಗಿರಲಿಲ್ಲ. ನಂತರ ನಾನು ಬಂದು ಇಸ್ಲಾಂ ಸ್ವೀಕರಿಸಿದೆ. ಹಝ್ರತ್ ಪೈಗಂಬರ್(ಸ) ಅವರು ನಮಗೆ ಸೂರಃ ಯೂಸುಫ್ ಮತ್ತು **ಇಖ್‌ರ ಬಿಇಸ್ಮಿ ರಬ್ಬಿಕಲ್ಲಝಿ ಖಲಖ** ವನ್ನು ಕಲಿಸಿದರು ಮತ್ತು ನಂತರ ನಾವು ಹಿಂತಿರುಗಿದೆವು. (ಅಲ್–ಮುಸ್ತದ್ರಕ್ ಅಲಸ್ಸಹೀಹೈನ್, ಸಂಪುಟ–4, ಪುಟಗಳು 165–166, ಕಿತಾಬ್ ಅಲ್–ಬರ್ರಿ ವಸ್ಸಿಲ, ಹದೀಸ್–7241, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ರಿಫಾ ಬಿನ್ ರಾಫಿ(ರ) ರವರು ಹೇಳುತ್ತಾರೆ, ಬದ್ರ್ ದಿನದಂದು ನನ್ನ ಕಣ್ಣಿಗೆ ಬಾಣ ತಗುಲಿತು ಅದರ ಕಾರಣದಿಂದ ನನ್ನ ಕಣ್ಣು ಹೊಡೆದುಹೋಯಿತು ಆಗ ಹಝ್ರತ್ ಪೈಗಂಬರ್(ಸ) ರವರು ನನ್ನ ಕಣ್ಣಿನ ಮೇಲೆ ತಮ್ಮ ಲಾಲಾರಸವನ್ನು ಹಚ್ಚಿದರು ಮತ್ತು ನನಗಾಗಿ ಪ್ರಾರ್ಥಿಸಿದರು ಇದರಿಂದಾಗಿ ನನಗೆ ಯಾವ ತೊಂದರೆ ಕಾಣಿಸಲಿಲ್ಲ. (ಸಬ್ಲುಲ್ ಹುದಾ ವರ್‍ರಶ್ಯಾದ್, ಸಂಪುಟ–4, ಪುಟ–53, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಇನ್ನೊಂದು ವರದಿಯ ಪ್ರಕಾರ ಬದ್ರ್ ಯುದ್ಧದ ದಿನದಂದು ಬಾಣವು ಹಝ್ರತ್ ರಿಫಾ ಬಿನ್ ರಾಫಿ(ರ) ಅವರಿಗೆ ತಗಲಿಲ್ಲ ಬದಲಿಗೆ ಅವರ ತಂದೆ ರಾಫಿ ಬಿನ್ ಮಾಲಿಕ್ ಅವರ ಕಣ್ಣಿಗೆ ತಗಲಿತ್ತು. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಕಿತಾಬುಲ್ ಬರ್ರಿ ವಸ್ಸಲ, ಪುಟ–1876, ಹದೀಸ್–5024, ಮಕ್ತಬ ನಝಾರ್ ಮುಸ್ತಫಲ್‌ಬಾರ್ 2000) ಅಲ್ಲಾಹನು ಬಲ್ಲವನಾಗಿದ್ದಾನೆ ಆದರೆ ಫಲಿತಾಂಶವು ನೋವು ಮಾಯವಾಗಿದೆ.

ಹಝ್ರತ್ ರಿಫಾ ಬಿನ್ ರಾಫಿ(ರ) ಹೇಳುತ್ತಾರೆ ಹಝ್ರತ್ ಪೈಗಂಬರ್(ಸ) ಒಂದು ದಿನ ಮಸೀದಿಯಲ್ಲಿ ಕುಳಿತಿದ್ದರು ಮತ್ತು ನಾವು ಸಹ ಅವರೊಂದಿಗೆ ಇದ್ದೆವು. ಅಷ್ಟರಲ್ಲಿ ಒಬ್ಬ ಗ್ರಾಮೀಣ ವ್ಯಕ್ತಿಯು ಬಂದನು.

ಅವನು ಬಂದು ನಮಾಝ್ ನಿರ್ವಹಿಸಿದನು ಮತ್ತು ಬಹಳ ಲಘುವಾಗಿ ನಮಾಝ್ ನಿರ್ವಹಿಸಿದನು. ತದನಂತರ ಆತನು ತಿರುಗಿ ಹಝ್ರತ್ ¥ ÈÀ§ gï(ಸ) ಅವರನ್ನು ಸಲಾಮ್ ಮಾಡಿದನು ಆಗ ಪೈಗಂಬರ್(ಸ)ರವರು ಆತನ ಸಲಾಮ್‌ಗೆ ಉತ್ತರ ನೀಡಿ ಹೇಳಿದರು.

ನೀವು ಹಿಂತಿರುಗಿ ಮತ್ತೆ ಪುನಃ ನಮಾಝ್ ನಿರ್ವಹಿಸಿರಿ ಏಕೆಂದರೆ ನಿವು ನಮಾಝ್ ನಿರ್ವಹಿಸಲಿಲ್ಲ. ಆತನು ಹಿಂದಿರುಗಿ ನಮಾಝ್ ನಿರ್ವಹಿಸಿನದು ಮತ್ತೆ ಪುನಃ ಹಿಂತಿರುಗಿ ಬಂದು ಪೈಗಂಬರ್(ಸ) ಅವರಿಗೆ ಸಲಾಮ್ ಹೇಳಿದನು. ಅದಕ್ಕೆ ಪೈಗಂಬರ್(ಸ)ರವರು ಆತನ ಸಲಾಮ್‌ಗೆ ಉತ್ತರ ನೀಡಿ ನೀವು ಪುನಃ ಹಿಂದಿರುಗಿ ನಮಾಝ್ ನಿರ್ವಹಿಸಿರಿ ಏಕೆಂದರೆ ನಿವು ನಮಾಝ್ ನಿರ್ವಹಿಸಲಿಲ್ಲ ಎಂದು ಹೇಳಿದರು. ಹೀಗೆ ಎರಡು ಮೂರು ಬಾರಿ ಮಾಡಿದರು. ಪ್ರತಿ ಬಾರಿಯೂ ಆತನು ಪೈಗಂಬರ್(ಸ) ಅವರ ಬಳಿಗೆ ಬಂದು ಸಲಾಮ್ ಹೇಳುತ್ತಿದ್ದರು ಆಗ ಪೈಗಂಬರ್(ಸ) ಅವರು ಸಹ ಆತನಿಗೆ ಉತ್ತರಿಸಿ ಹಿಂದಿರುಗಿ ನಮಾಝ್ ನಿರ್ವಹಿಸಿರಿ ಏಕೆಂದರೆ ನೀವು ನಮಾಝ್ ನಿರ್ವಹಿಸಲಿಲ್ಲ ಎಂದು ಹೇಳಿತ್ತಿದ್ದರು. ಆಗ ಅಲ್ಲಿದ್ದ ಜನರೆಲ್ಲರು ಭಯಭೀತರಾದರು ಅಂದರೆ ಯಾರು ಲಘುವಾಗಿ ನಮಾಝ್ ನಿರ್ವಹಿಸುತ್ತಾರೊ ಅವರು ನಮಾಝ್ ನಿರ್ವಹಿಸುದಿಲ್ಲ ಎಂದು ಅವರಿಗೆ ಅರ್ಥವಾಯಿತು. ಅಲ್ಲಿ ಕುಳಿತಿದ್ದ ಸಹಾಬರವರಿಗೆ ಲಘುವಾದ ನಮಾಝ್ ನಮಾಝ್ ಇಲ್ಲ ಎಂದು ಬಹಳ ಭಯಭೀತರಾದರು.

ಈ ಅರ್ಥದಲ್ಲಿ ನಮ್ಮನ್ನು ನಾವು ಸಹ ಮೌಲ್ಯಮಾಪನ ಮಾಡಿಕೊಳ್ಳಬೇಕು.

ಕೊನೆಗೆ ಆ ಗ್ರಾಮೀಣ ವ್ಯಕ್ತಿಯು ಓದಿ ತೋರಿಸಲು ಮತ್ತು ಕಲಿಸಿಕೊಡಲು ವಿನಂತಿಸಿಕೊಂಡನು. ನಾನು ಮನುಷ್ಯನಾಗಿದ್ದೇನೆ ನಾನು ಸರಿಯೂ ಮಾಡುತ್ತೇನೆ ಮತ್ತು ನಾನು ತಪ್ಪುಗಳನ್ನು ಸಹ ಮಾಡುತ್ತೇನೆ, ಅದಕ್ಕೆ ರಸೂಲುಲ್ಲಾಹ್(ಸ)ರವರು ಹೇಳಿದರು, ಸರಿ, ನೀವು ನಮಾಝ್‌ಗಾಗಿ ನಿಲ್ಲುವ ಉದ್ದೇಶ ಮಾಡಿಕೊಂಡರೆ ಅಲ್ಲಾಹನು ನಿಮಗೆ ವುಝೂ ಮಾಡಲು ಆದೇಶಿಸಿರುವಂತೆ ಮೊದಲು ವುಝೂ ಮಾಡಬೇಕು. ನಂತರ, ನೀವು ಪವಿತ್ರ ಖುರ್‌ಆನ್‌ನಿಂದ ಏನನ್ನಾದರೂ ನೆನಪಿಸಿಕೊಂಡರೆ, ಅದನ್ನು ಪಠಿಸಿ, ಇಲ್ಲದಿದ್ದರೆ **ಅಲ್-ಹಮ್ದುಲಿಲ್ಲಾಹ್, ಅಲ್ಲಾಹು ಅಕ್ಬರ್ ಮತ್ತು ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳಿ. ಅನಂತರ ನಿಧಾನವಾಗಿ ರುಕೂಅ್ ಮಾಡಿರಿ. ಅನಂತರ ನೇರವಾಗಿ ನಿಲ್ಲಿರಿ. ಅನಂತರ ಸರಿಯಾದ ರೀತಿಯಲ್ಲಿ ಸಜ್ದ ಮಾಡಿರಿ. ಅನಂತರ ಸಮಾಧಾನದಿಂದ ಕುಳಿತುಕೊಳ್ಳಿರಿ. ಪುನಃ ಸಜ್ದ ಮಾಡಿ ಎದ್ದೇಳಿರಿ. ನೀವು ಹೀಗೆ ಮಾಡಿದರೆ ನಿಮ್ಮ ನಮಾಝ್ ಪೂರ್ತಿಯಾಯಿತು. ನೀವು ಇದರಲ್ಲಿ ಏನಾದರೂ ಕಮ್ಮಿ ಮಾಡಿದರೆ ನೀವು ನಿಮ್ಮ ನಮಾಝಿನಲ್ಲಿ ಅಷ್ಟೇ ಕಡಿಮೆಗೊಳಿಸಿದ್ದೀರಿ ಎಂದಾಯಿತು.
(ಸುನನ್ ಅತ್ತಿರ್‌ಮಿಝಿ, ಕಿತಾಬುಸ್ಸಲಾತ್, ಹದೀಸ್-302)

ಹಝ್ರತ್ ರಿಫಾ ಬಿನ್ ರಾಫಿ ರವರು ವರದಿ ಮಾಡುತ್ತಾರೆ ಅವರು ರಸೂಲುಲ್ಲಾಹ್(ಸ) ಅವರ ಪಕ್ಕದಲ್ಲಿ ಕುಳಿತಿದ್ದರು ಮತ್ತು ಅಲ್ಲಾಹನ ಆದೇಶದಂತೆ ಸಂಪೂರ್ಣ ವುಝೂ ಮಾಡುವವರೆಗೆ ಯಾರ ನಮಾಝ್ ಪೂರ್ಣಗೊಳ್ಳುವುದಿಲ್ಲ ಎಂದು ಹೇಳಿದರು. ನಿಮ್ಮ ಮುಖ ಮತ್ತು ಎರಡೂ ಕೈಗಳನ್ನು ಮೊಣಕೈಗಳವರೆಗೆ ತೊಳೆಯಿರಿ ಮತ್ತು ನಿಮ್ಮ ತಲೆಯ ಮಸಹ್ ಮಾಡಿರಿ ಮತ್ತು ನಿಮ್ಮ ಎರಡೂ ಪಾದಗಳನ್ನು ಕಣಕಾಲುಗಳವರೆಗೆ ತೊಳೆಯಿರಿ. (ಸುನನ್ ಇಬ್ನ್ ಮಾಜಾ, ಕಿತಾಬ್ ಅಲ್-ತಹಾರಹ್, ಹದೀಸ್: 460)

ಮತ್ತೊಂದು ವರದಿಯಲ್ಲಿ ಹಝ್ರತ್ ರಿಫಾ ಬಿನ್ ರಾಫಿ(ರ) ಅವರು ಹೇಳಿದರು, ನೀವು ನಿಂತುಕೊಂಡು ಖಿಬ್ಲದ ಕಡೆ ಮುಖಮಾಡಿದಾಗ ನೀವು ಅಲ್ಲಾಹು ಅಕ್ಬರ್ ಎಂದು ಹೇಳಿ ಮತ್ತು ಅಲ್ಲಾಹನು ಬಯಸಿದಷ್ಟು ಪವಿತ್ರ ಖುರ್‌ಆನ್‌ನ ಜೊತೆಗೆ ಸೂರಾ ಫಾತಿಹಾವನ್ನು ಪಠಿಸಿರಿ. ನಿಮಗೆ ಇಷ್ಟವಾದಂತೆ ನೀವು ಏನು ಓದಬೇಕೆಂದು ನಿಮಗೆ ನೆನಪಿದೆಯೇ, ನೀವು ಪಠಿಸಿರಿ. ನಿವು ರುಕೂ ಮಾಡುವಾಗ ನಿಮ್ಮ ಎರಡು ಅಂಗೈಗಳನ್ನು ನಿಮ್ಮ ಮೊಣಕಾಲುಗಳ ಮೇಲೆ ಇರಿಸಿ ಮತ್ತು ನಿಮ್ಮ ಬೆನ್ನನ್ನು ನೇರವಾಗಿ ಇರಿಸಿ, ಮತ್ತು ಅವರು ಹೇಳಿದರು: ನೀವು ಸಜದ ಮಾಡುವಾಗ ಸಂತೃಪ್ತಿಯಿಂದ ಸಜದ ಮಾಡಿರಿ ಮತ್ತು ನೀವು ನಿಮ್ಮ ತಲೆಯನ್ನು ಮೇಲೆ ಎತ್ತಿದಾಗ ನಿಮ್ಮ ಎಡ ತೊಡೆಯ ಮೇಲೆ ಕುಳಿತುಕೊಳ್ಳಿ. (ಸುನನ್ ಅಬಿ ದಾವುದ್, ಕಿತಾಬ್ ಅಲ್-ಸಲಾತ್, ಹದೀಸ್ ಸಂಖ್ಯೆ-859)

ಮುಂದಿನದ್ದು ಹಝ್ರತ್ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ)ರ ಪ್ರಸ್ತಾಪವಾಗಿದೆ. ಉಸ್ಮಾನ್ ಬಿನ್ ಉಬೈದುಲ್ಲಾ ವರದಿ ಮಾಡುತ್ತಾರೆ ನಾನು ಉಸೈದ್ ಅವರನ್ನು ತಮ್ಮ ಗಡ್ಡವನ್ನು ಕೆಂಪು ಬಣ್ಣದಿಂದ ಬಣ್ಣಿಸುತ್ತಿರುವುದನ್ನು ಕಂಡೆನು.

(ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-421, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಇಬ್ನು ಇಸ್‌ಹಾಖ್ ಹೇಳುತ್ತಾರೆ: ಹಝ್ರತ್ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ) ಬದ್ರ್ ಯುದ್ಧದಲ್ಲಿ ಭಾಗಿಯಾಗಿದ್ದರು. ಅವರ ಇಳಿವಯಸ್ಸಿನಲ್ಲಿ ಅವರಿಗೆ ದೃಷ್ಟಿ ಶಕ್ತಿ ಇಲ್ಲವಾದಾಗ ಅವರು ಹೇಳಿದರು: ನಾನಿಂದು ಬದ್ರ್ ಮೈದಾನದಲ್ಲಿ ಇರುತ್ತಿದ್ದರೆ ಮತ್ತು ನನ್ನ ದೃಷ್ಟಿ ಸರಿಯಿರುತ್ತಿದ್ದರೆ ನಾನು ನಿಮಗೆ ದೇವದೂತರು ಇಳಿದ ಕಣಿವೆಯನ್ನು ತೋರಿಸುತ್ತಿದ್ದೆ. ಅದರಲ್ಲಿ ನನಗೆ ಯಾವುದೇ ಸಂಶಯವಿಲ್ಲ.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ-431, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಉಸೈದ್ ಬಿನ್ ಮಾಲಿಕ್ ಬಿನ್ ರಬೀಅ(ರ) ಹೇಳುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರ ಸಮೀಪದಲ್ಲಿ ಕುಳಿತುಕೊಂಡಿದ್ದೆವು. ಬನೂ ಸಲ್ಮಾದ ಒಬ್ಬ ವ್ಯಕ್ತಿ ಬಂದು ಕೇಳಿದರು: ತಂದೆತಾಯಂದಿರು ಮೃತಪಟ್ಟ ನಂತರವೂ ಅವರೊಂದಿಗೆ ಉತ್ತಮವಾಗಿ ವರ್ತಿಸುವುದು ಅವಶ್ಯವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅವರಿಗಾಗಿ ದುಆ ಮಾಡಿರಿ, ಅವರ ಪರವಾಗಿ ಪಶ್ಚಾತ್ತಾಪ ಮಾಡಿರಿ, ಅವರ ವಾಗ್ದಾನಗಳನ್ನು ಈಡೇರಿಸಿರಿ, ಅವರ ಸಂಬಂಧಿಕರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ, ಅವರ ಸ್ನೇಹಿತರನ್ನು ಗೌರವಿಸಿರಿ. (ಸುನನ್ ಅಬೂದಾವೂದ್, ಕಿತಾಬುಲ್ ಅದಬ್, ಹದೀಸ್-5142) ಈ ರೀತಿಯಾಗಿ ಅವರಿಗೂ ಪ್ರತಿಫಲ ಲಭಿಸುತ್ತಾ ಇರುವುದು ಮತ್ತು ಅವರ ಪಾಪಗಳನ್ನು ಕ್ಷಮಿಸಲಾಗುವುದು.

ಮಾಲಿಕ್ ಬಿನ್ ರಬೀಅರವರು ವರದಿ ಮಾಡುತ್ತಾರೆ ನಾನು ಹಝ್ರತ್ ಪೈಗಂಬರ್(ಸ) ಹೇಳುವುದನ್ನು ಕೇಳಿದೆ: ಓ ಅಲ್ಲಾಹನೇ!! ತಲೆ ಬೋಳಿಸುವವರನ್ನು ಕ್ಷಮಿಸು. ಅಷ್ಟರಲ್ಲಿ ಒಬ್ಬ ವ್ಯಕ್ತಿ ಹೇಳಿದನು ಮತ್ತು ಕೂದಲು ಕತ್ತರಿಸುವವನು? ಅದಕ್ಕೆ ರಸೂಲುಲ್ಲಾಹ್(ಸ) ಅವರು ಮೂರನೇ ಅಥವಾ ನಾಲ್ಕನೇ ಬಾರಿ ತಮ್ಮ ಕೂದಲನ್ನು ಕತ್ತರಿಸುವವರಿಗೂ ಎಂದು ಹೇಳಿದರು. ಅಂದು ನಾನೂ ಕೂಡ ತಲೆ ಬೋಳಿಸಿಕೊಂಡಿದ್ದೆ ಅದರಿಂದ ನನಗೆ ಲಭಿಸಿದ ಸಂತೋಷವು ನನಗೆ ಕೆಂಪು ಒಂಟೆ ಸಿಕ್ಕರೂ ಅಥವಾ ಕೈತುಂಬಾ ಸಂಪತ್ತು ಸಿಕ್ಕರೂ ಸಿಗುತ್ತಿರಲಿಲ್ಲ.
(ಅತ್ತಬಖಾತುಲ್ ಕುಬ್ರ, ಭಾಗ-2, ಪುಟ-79-80, ದರುಲ್ ಕುತುಬ್ ಇಲ್‌ಮಿಯ ಬೈರೂತ್)

ಉಸ್ಮಾನ್ ಬಿನ್ ಅರ್‌ಖಮ್(ರ) ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಬದ್ರ್ ಯುದ್ಧದ ದಿನದಂದು ಹೇಳಿದರು: ನಿಮ್ಮ ಬಳಿಯಲ್ಲಿರುವ ಯುದ್ಧ ಸಂಪತ್ತನ್ನು ಬಿಟ್ಟುಬಿಡಿರಿ. ಆಗ ಹಝ್ರತ್ ಅಬೂ ಉಸೈದ್ ಅಸ್ಸಾಯಿದೀ(ರ) **ಆಯಿದ್ಝುಲ್ ಮರ್‌ಝುಬಾನಿನ** ಖಡ್ಗವನ್ನು ಕೊಟ್ಟರು. ಹಝ್ರತ್ ಪೈಗಂಬರ್(ಸ)ರಿಂದ ಹಝ್ರತ್ ಅರ್‌ಖಮ್(ರ) ಆ ಖಡ್ಗವನ್ನು ಬೇಡಿದರು. ಆಗ ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಅವರಿಗೆ ದಯಪಾಲಿಸಿದರು.
(ಮಾರಿಫತಿಸ್ಸಹಾಬ ಲಿ ಅಬಿನುಐಮ್, ಸಂಪುಟ-1, ಪುಟ-295, ಹದೀಸ್-1022, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ನಂತರ ಹಝ್ರತ್ ಅಬ್ದುಲ್ಲಾ ಬಿನ್ ಅಬ್ದುಲ್ ಅಸದ್(ರ)ರವರ ಪ್ರಸ್ತಾಪವಿದೆ. ಒಂದು ವರದಿಯಲ್ಲಿ ಮುಹಮ್ಮದ್ ಬಿನ್ ಉಮ್ಮಾರಃ ಹೇಳುತ್ತಾರೆ ಮಕ್ಕಾದಿಂದ ವಲಸೆ ಬಂದು ಮದೀನಕ್ಕೆ ಬಂದವರಲ್ಲಿ ಹಝ್ರತ್ ಅಬು ಸಲಮ ಬಿನ್ ಅಬ್ದುಲ್ ಅಸದ್(ರ) ರವರು ನಮ್ಮ ಬಳಿ ಮೊದಲು ಬಂದವರು. ಅವರು ಮೊಹರ್ರಮ್‌ನ 10 ರಂದು ಮದೀನಕ್ಕೆ ಬಂದರು. ರಸೂಲುಲ್ಲಾಹ್(ಸ)ರವರು 12 ರಬೀಉಲ್ ಅವ್ವಲ್‌ನಲ್ಲಿ ಮದೀನಕ್ಕೆ ಆಗಮಿಸಿದ್ದರು. ಮುಹಾಜಿರೀನ್‌ರಲ್ಲಿ ಮೊದಲು ಬಂದವರು ಬನೂ ಅಮ್ರ್ ಬಿನ್ ಔಫ್ ಆಗಿದ್ದಾರೆ ಮತ್ತು ಕೊನೆಯದಾಗಿ ಬಂದವರಲ್ಲಿ ಎರಡು ತಿಂಗಳ ಅಂತರವಿತ್ತು.

ಹಝ್ರತ್ ಉಮ್ಮೆ ಸಲಮ(ರ) ವರದಿ ಮಾಡುತ್ತಾರೆ ಹಝ್ರತ್ ಅಬು ಸಲಮ(ರ) ಮದೀನಕ್ಕೆ ವಲಸೆ ಹೋದಾಗ, ಅವರು ಹಝ್ರತ್ ಮುಬಶ್ಶಿರ್ ಬಿನ್ ಅಬ್ದ್ ಅಲ್-ಮುಂಝಿರ್(ರ) ಅವರೊಂದಿಗೆ ಖುಬಾದಲ್ಲಿ ತಂಗಿದ್ದರು. ಅವರು ವಲಸೆ ಹೋದಾಗ, ಅವರು ಖುಬಾದಲ್ಲಿ ಹಝ್ರತ್ ಮುಬಶ್ಶಿರ್ ಬಿನ್ ಅಬ್ದ್ ಅಲ್-ಮುನ್ಝಿರ್ ಅವರೊಂದಿಗೆ ಇದ್ದರು. ಹಝ್ರತ್ ಪೈಗಂಬರ್(ಸ) ರವರು ಹಝ್ರತ್ ಅಬೂ ಸಲಮ ಬಿನ್ ಅಬ್ದುಲ್ ಅಸದ್(ರ) ಮತ್ತು ಹಝ್ರತ್ ಸಾಅದ್ ಇಬ್ನೆ ಖೈಸಮರವರ ನಡುವೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು.
(ಅತ್ತಬಾಖತುಲ್ ಕುಬ್ರ ಲಿಇಬ್ನೆ ಸಾಅದ್, ಭಾಗ-3, ಪುಟ-181, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಪೈಗಂಬರ್(ಸ) ಅವರಿಗೆ ತನ್ನ ಸಹೋದರ ಪುತ್ರಿಯನ್ನು ಭೇಟಿಯಾಗಲು ಮದೀನಕ್ಕೆ ಬಂದಿದ್ದ ಬನು ತೈ ಗೋತ್ರದ ವ್ಯಕ್ತಿಯೊಬ್ಬರು ಖುವೈಲಿದ್‌ನ ಪುತ್ರ ತುಲೈಹಾ ಮತ್ತು ಸಲಮ ಅವರು ನಮ್ಮ ಜನರಲ್ಲಿ

ಓಡಾಡುತ್ತಿದ್ದಾರೆ ಮತ್ತು ತಮ್ಮ ಜನಾಂಗದವರ ಮತ್ತು ಆ ಜನರನ್ನು ಹಝ್ರತ್ ಪೈಗಂಬರ್(ಸ)ರವರ ವಿರುದ್ಧ ಯುದ್ಧವನ್ನು ಪ್ರಚೋದಿಸುತ್ತಿದ್ದಾರೆ ತಿಳಿಸಿದಾಗ. ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಅಬು ಸಲಮ ಅವರನ್ನು ಕರೆದರು, ಅಂದರೆ ಹಝ್ರತ್ ಅಬ್ದುಲ್ಲಾ ಬಿನ್ ಅಬ್ದುಲ್ ಅಸದ್ ಅವರಿಗೆ ಹಝ್ರತ್ ಪೈಗಂಬರ್(ಸ) ಒಂದು ಧ್ವಜವನ್ನು ಕೊಟ್ಟು ಬನೂ ಅಸದ್ ಗೋತ್ರವನ್ನು ದಮನಿಸಲು 150 ಮುಹಾಜಿರರು ಮತ್ತು ಅನ್ಸಾರರಿಗೆ ಸೇನಾಧಿಪತಿಯನ್ನಾಗಿ ಮಾಡಿಕೊಂಡು ಕಳುಹಿಸಿದರು. ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಅಬು ಸಲಮ(ರ) ಅವರಿಗೆ ಹೀಗೆ ಆದೇಶಿಸಿದರು: ನೀವು ಬನೂ ಅಸದ್ ಪ್ರದೇಶವನ್ನು ತಲುಪುವವರೆಗೆ ನೀವು ಮುನ್ನಡೆಯಬೇಕು ಮತ್ತು ಅವರು ತಮ್ಮ ಸೈನ್ಯದೊಂದಿಗೆ ನಿಮ್ಮನ್ನು ಎದುರಿಸುವ ಮೊದಲು ಅವರ ಮೇಲೆ ಬೀಡುಬಿಟ್ಟು ದಾಳಿ ಮಾಡಬೇಕು. ಹೀಗಾಗಿ ಈ ಆದೇಶದ ಮೇರೆಗೆ, ಹಝ್ರತ್ ಅಬು ಸಲಮ(ರ) ಅವರು ಹಗಲು ರಾತ್ರಿ ಅತ್ಯಂತ ವೇಗದಲ್ಲಿ ಪ್ರಯಾಣಿಸಿದರು ಮತ್ತು ಸಾಮಾನ್ಯ ರಸ್ತೆಗಳಿಂದ ದೂರ ಸರೆದರು, ಅದಕ್ಕೆ ಕಾರಣ ಬನು ಅಸದ್ ಅವರಿಗೆ ಅವರ ಮುನ್ನಡೆಯ ಬಗ್ಗೆ ತಿಳಿಯುವ ಮೊದಲು ಅವರು ಇದ್ದಕ್ಕಿದ್ದಂತೆ ಅವರ ಬಳಿ ಬಂದು ತಲುಪಿದರು. ಅಂತಿಮವಾಗಿ, ಅವರು ನಡೆದುಕೊಂಡು ಹೋಗುತ್ತಿರುವಾಗ, ಅವರು ಬನು ಅಸದ್‌ರವರ ಚಿಲುಮೆಯನ್ನು ತಲುಪಿದರು ಮತ್ತು ಅವರು ದನದ ದೊಡ್ಡಿಗೆ ದಾಳಿ ಮಾಡಿದರು ಮತ್ತು ಅವರ ಮೂರು ಕುರುಬರನ್ನು ಸೆರೆಹಿಡಿದರು. ಉಳಿದವರೆಲ್ಲರೂ ಪ್ರಾಣಾಪಾಯದಿಂದ ಪಾರಾಗುವಲ್ಲಿ ಯಶಸ್ವಿಯಾದರು. ಹಝ್ರತ್ ಅಬು ಸಲಮ(ರ) ಅವರು ತಮ್ಮ ಸೈನ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿದರು ಮತ್ತು ಒಂದು ಭಾಗವನ್ನು ತಮ್ಮ ಬಳಿ ಇಟ್ಟುಕೊಂಡು ಉಳಿದ ಎರಡನ್ನು ಸುತ್ತಮುತ್ತಲು ಕಳುಹಿಸಿದರು. ಈ ಜನರು ಕೆಲವು ಒಂಟೆಗಳು ಮತ್ತು ಮೇಕೆಗಳನ್ನು ಹಿಡಿದುಕೊಂಡರು ಆದರೆ ಯಾವುದೇ ಮನುಷ್ಯನನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಅದರ ನಂತರ ಹಜ್ರತ್ ಅಬು ಸಲಮ(ರ)ರವರು ಮದೀನಾಗೆ ಮರಳಿದರು. ಇದು ಸೀರತ್ ಅಲ್-ಹಲ್ಬಿಯಾದ ಉಲ್ಲೇಖವಾಗಿದೆ. (ಅಸ್ಸೀರತುಲ್ ಹಲಬೀಯ, ಭಾಗ-3, ಪುಟ-231, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2002)

ಉಮ್ರ್ ಬಿನ್ ಅಬು ಸಲಮಾ(ರ) ಅವರು ಬದ್ರ್ ಯುದ್ಧದಲ್ಲಿ ಹಝ್ರತ್ ಅಬು ಸಲಮಾ(ರ) ಭಾಗವಹಿಸಿದ್ದರು ಮತ್ತು ಉಹುದ್‌ನಲ್ಲಿಯೂ ಭಾಗವಹಿಸಿದ್ದರು ಮತ್ತು ಅಬು ಉಸಾಮಾ ಜುಶಮಿ ಎಂಬವನು ಅವರಿಗೆ ಉಹುದ್ ಯುದ್ಧದಲ್ಲಿ ಗಾಯಗೊಳಿಸಿದನು. ಅವನು ಈಟಿಯಿಂದ ಹಝ್ರತ್ ಅಬು ಸಲಮಾ(ರ) ಅವರ ಭುಜವನ್ನು ಇರಿದನು. ಹಝ್ರತ್ ಅಬು ಸಲಮಾ(ರ) ಒಂದು ತಿಂಗಳ ಕಾಲ ಗಾಯಕ್ಕೆ ಚಿಕಿತ್ಸೆ ನೀಡುವುದನ್ನು ಮುಂದುವರೆಸಿದರು, ಅದು ಸ್ಪಷ್ಟವಾಗಿ ಸುಧಾರಿಸಿತು. ಗಾಯವು ವಾಸಿಯಾಯಿತು, ಅದರ ಅದರ ದೋಷವನ್ನು ಯಾರೂ ಗುರುತಿಸಲಿಲ್ಲ. ಹಿಜ್ರತ್‌ನ ಮೂವತ್ತೈದನೇ ತಿಂಗಳ ಮೊಹರಂನಲ್ಲಿ, ಹಝ್ರತ್ ಪೈಗಂಬರ್(ಸ)ರವರು ಅವರನ್ನು ಖತನ್‌ನಲ್ಲಿರುವ ಬನು ಅಸದ್‌ನ ಕಡೆಗೆ ಕಳುಹಿಸಿದರು. ಖತನ್‌ಗೆ ಸಂಬಂಧಿಸಿದಂತೆ, ಇದು ಅನಿರೂಹ್ (ನಜ್ದ್) ಮತ್ತು ಖೈಬರ್‌ನ ಮಧ್ಯದಲ್ಲಿರುವ ಪರ್ವತವಾಗಿದೆ, ಅದರ ಉತ್ತರದಲ್ಲಿ ಬನು ಅಸದ್ ಬಿನ್ ಖುಝೈಮಾ ವಾಸಿಸುತ್ತಿದ್ದರು. ಆದಾಗ್ಯೂ, ಅವರು ಹತ್ತು ರಾತ್ರಿಗಳಿಗಿಂತ ಹೆಚ್ಚು ಕಾಲ ಮದೀನಾದಿಂದ ಹೊರಗುಳಿದ ನಂತರ ಹಿಂದಿರುಗಿದರು, ಮತ್ತು ಅವರ ಗಾಯವು ಉಲ್ಬಣಗೊಂಡಿತು ಮತ್ತು ಅವರು ಅನಾರೋಗ್ಯಕ್ಕೆ ಒಳಗಾದರು ಮತ್ತು ಮೂರು ಜಮಾದಿ ಅಲ್-ಆಖಿರ್, ನಾಲ್ಕು ಹಿಜ್ರಿಯಲ್ಲಿ ನಿಧನಹೊಂದಿದರು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅ್‌ದ್, ಭಗ-3, ಪುಟ-182, ದರುಲ್ ಕುತುಬ್ ಇಲ್ಮಿಯ ಬೈರೂತ್) (ಫರ್ಹಂಗ್ ಸೀರತ್, ಪುಟ-237, ಝೋವರ್ ಅಕಾಡೆಮಿ ಕರಾಚಿ 2003)

ಅಬೂಖಿಲಾಬ ವರದಿ ಮಡುತ್ತಾರೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬು ಸಲಮಾ ಬಿನ್ ಅಬ್ದುಲ್ ಅಸದ್(ರ) ಅವರನ್ನು ಇಯಾದತ್ (ರೋಗಿಯನ್ನು ಭೇಟಿಮಾಡುವುದು) ಮಾಡಲು ಬಂದರು. ಹಝ್ರತ್ ಪೈಗಂಬರ್(ಸ) ರವರ ಆಗಮನದೊಂದಿಗೆ, ಅವರ ಆತ್ಮವು ಹಾರಿಹೋಯಿತು.

ವರದಿಗಾರರು ಹೇಳುತ್ತಾರೆ ಅಲ್ಲಿರುವ ಮಹಿಳೆಯರು ಏನೋ ಹೇಳಿದಾಗ ಹಝ್ರತ್ ಪೈಗಂಬರ್(ಸ)ರವರು ಅವರನ್ನು ತಡೆದು ಹೇಳಿದರು: ಒಳ್ಳೆಯದನ್ನು ಹೊರತುಪಡಿಸಿ ನಿಮ್ಮ ಆತ್ಮಗಳಿಗಾಗಿ ಪ್ರಾರ್ಥಿಸಬೇಡಿ, ಏಕೆಂದರೆ ದೇವದೂತರು ಮರಣ ಹೊಂದಿದವರ ಬಳಿ ಅಥವಾ ಮರಣಹೊಂದಿದ ಸಂಬಂಧಿಕರ ಉಪಸ್ಥಿತರಿರುತ್ತಾರೆ. ಅವರು ಅವರ ದುಆಗೆ ಆಮೀನ್ ಹೇಳುತ್ತಾರೆ. ಆದ್ದರಿಂದ ಒಳ್ಳೆಯದನ್ನು ಹೊರತುಪಡಿಸಿ ನಿಮಗಾಗಿ ಪ್ರಾರ್ಥಿಸಬೇಡಿ. ತದನಂತರ ಅವರು(ಸ) ಹೇಳಿದರು: ಓ ಅಲ್ಲಾಹನೇ! ಅವರ ಖಬರ್‌ಅನ್ನು ಅವರಿಗಾಗಿ ವಿಶಾಲವಾಗಿ ಮಾಡು ಮತ್ತು ಅದರಲ್ಲಿ ಅವರಿಗೆ ಪ್ರಕಾಶಮಾನವನ್ನಾಗಿಸು. ಅವರ ಬೆಳಕನ್ನು ಹೆಚ್ಚಿಸಿ ಮತ್ತು ಅವರ ಪಾಪಗಳನ್ನು ಕ್ಷಮಿಸಿ. ಓ ಅಲ್ಲಾಹನೇ! ಮಾರ್ಗದರ್ಶಿ ಜನರಲ್ಲಿ ಅವರ ಶ್ರೇಣಿಯನ್ನು ಹೆಚ್ಚಿಸಿ. ಮತ್ತು ಅವರ ವಂಶಸ್ಥರಲ್ಲಿ, ನೀನು ಅವರ ಉಪನಾಯಕನಾಗು. ನಮ್ಮನ್ನು ಮತ್ತು ಅವರನ್ನು ಕ್ಷಮಿಸು. ಓ ಲೋಕಗಳ ಪ್ರಭು! ನಂತರ ಅವರು ಹೇಳಿದರು: ಆತ್ಮವು ಹೊರಬಂದಾಗ, ದೃಷ್ಟಿ ಅದರ ಹಿಂದೆ ಇರುತ್ತದೆ. ಅವನ ಕಣ್ಣು ತೆರೆದಿರುವುದು ನಿನಗೆ ಕಾಣುವುದಿಲ್ಲವೇ? (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅ್‌ದ್, ಭಾಗ-3, ಪುಟ-183, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಮುಂದಿನದ್ದು ಹಝ್ರತ್ ಖಲಾದ್ ಬಿನ್ ರಾಫೀ ಅಝ್ಝುರ್‌ಖಿ(ರ)ರ ಪ್ರಸ್ತಾಪವಾಗಿದೆ. ಹಝ್ರತ್ ಖಲಾದ್ ಬಿನ್ ರಾಫೀ ಅಝ್ಝುರ್‌ಖಿ(ರ)ರ ಸಂಬಂಧ ಅನ್ಸಾರಿನ ಗೋತ್ರವಾದ ಬನೂ ಖಝ್ರಜಿನ ಶಾಖೆಯಾದ ಅಜ್‌ಲಾನ್‌ನೊಂದಿಗೆ ಆಗಿತ್ತು.

ಅವರ ತಾಯಿಯ ಹೆಸರು ಉಮ್ಮೆ ಮಾಲಿಕ್ ಬಿನ್ತ್ ಉಬೈ ಬಿನ್ ಮಾಲಿಕ್ ಎಂದಾಗಿತ್ತು. ಹಝ್ರತ್ ಖಾಲ್ಲಾದ್ ಅವರ ಪುತ್ರನ ಹೆಸರು ಯಾಹ್ಯಾ ಆಗಿತ್ತು ಅವರು ಉಮ್ಮೆ ರಫಿ ಬಿನ್ತ್ ಉಸ್ಮಾನ್ ಬಿನ್ ಖಾಲಿದ್ ಅವರಿಂದ ಜನಿಸಿದ್ದರು. ಅವರ ಎಲ್ಲಾ ಮಕ್ಕಳು ಬೇಗನೆ ಮರಣಹೊಂದಿದರು ಎಂದು ಬರೆಯಲಾಗಿದೆ. (ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-447, ದರುಲ್ ಕುತುಬ್ ಇಲ್ಮಿಯ 1990)

ನಮಾಝನ್ನು ನಿರ್ವಹಿಸುವ ವರದಿಯನ್ನು ಮುಂಚೆಯೇ ಪ್ರಸ್ತಾಪಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಎರಡು ಮೂರು ಬಾರಿ ನಮಾಝ್ ಪುನಃ ನಿರ್ವಹಿಸಲು ಹೇಳಿದ್ದು ಮತ್ತು ಅವರ ಬೇಡಿಕೆ ಪ್ರಕಾರ ನಮಾಝನ್ನು ಕಲಿಸಿದ್ದು ಹಝ್ರತ್ ಖಲಾದ್ ಬಿನ್ ರಾಫೀ(ರ)ರಿಗೆ ಆಗಿತ್ತು. ಸಹೀಹ್ ಬುಖಾರಿಯಲ್ಲಿ, ಹಝ್ರತ್ ಅಬೂಹುರೈರ(ರ)ರವರು ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ರವರು ಮಸೀದಿಗೆ ಆಗಮಿಸಿದರು. ಅಷ್ಟರಲ್ಲಿ ಒಬ್ಬ ಗ್ರಾಮೀಣ ವ್ಯಕ್ತಿಯು ಬಂದನು. ಅವನು ಬಂದು ನಮಾಝ್ ನಿರ್ವಹಿಸಿದನು ಮತ್ತು ಬಹಳ ಲಘುವಾಗಿ ನಮಾಝ್ ನಿರ್ವಹಿಸಿದನು. ತದನಂತರ ಆತನು ತಿರುಗಿ ಹಝ್ರತ್ ಪೈಗಂಬರ್(ಸ) ಅವರನ್ನು ಸಲಾಮ್ ಮಾಡಿದನು ಆಗ ಪೈಗಂಬರ್(ಸ)ರವರು ಆತನ ಸಲಾಮ್‌ಗೆ ಉತ್ತರ ನೀಡಿ ಹೇಳಿದರು. ನೀವು ಹಿಂತಿರುಗಿ ಮತ್ತೆ ನಮಾಝ್ ನಿರ್ವಹಿಸಿರಿ ಏಕೆಂದರೆ ನಿವು ನಮಾಝ್ ನಿರ್ವಹಿಸಲಿಲ್ಲ. ಆತನು ಹಿಂದಿರುಗಿ ನಮಾಝ್ ನಿರ್ವಹಿಸಿ ಮತ್ತೆ ಹಿಂತಿರುಗಿ ಬಂದು ಪೈಗಂಬರ್(ಸ) ಅವರಿಗೆ ಸಲಾಮ್ ಹೇಳಿದನು. ಅದಕ್ಕೆ ಪೈಗಂಬರ್(ಸ)ರವರು ಆತನ ಸಲಾಮ್‌ಗೆ ಉತ್ತರ ನೀಡಿ ನೀವು ಪುನಃ ಹಿಂದಿರುಗಿ ನಮಾಝ್ ನಿರ್ವಹಿಸಿರಿ ಏಕೆಂದರೆ ನಿವು ನಮಾಝ್ ನಿರ್ವಹಿಸಲಿಲ್ಲ ಎಂದು ಹೇಳಿದರು. ಹೀಗೆ ಎರಡು ಮೂರು ಬಾರಿ ಮಾಡಿದರು. ಪ್ರತಿ ಬಾರಿಯೂ ಆತನು ಪೈಗಂಬರ್(ಸ) ಅವರ ಬಳಿಗೆ ಬಂದು ಸಲಾಮ್ ಹೇಳುತ್ತಿದ್ದರು ಆಗ ಪೈಗಂಬರ್(ಸ) ಅವರು ಸಹ ಆತನಿಗೆ ಉತ್ತರಿಸಿ ಹಿಂದಿರುಗಿ ನಮಾಝ್ ನಿರ್ವಹಿಸಿರಿ ಏಕೆಂದರೆ ನೀವು ನಮಾಝ್ ನಿರ್ವಹಿಸಲಿಲ್ಲ ಎಂದು ಹೇಳಿತ್ತಿದ್ದರು. ಕೊನೆಗೆ ಆ ಗ್ರಾಮೀಣ ವ್ಯಕ್ತಿಯು ಓದಿ ತೋರಿಸಲು ಮತ್ತು ಕಲಿಸಿಕೊಡಲು ವಿನಂತಿಸಿಕೊಂಡನು. ಅದಕ್ಕೆ ರಸೂಲುಲ್ಲಾಹ್(ಸ)ರವರು ಹೇಳಿದರು, ಸರಿ, ನೀವು ನಮಾಝ್‌ಗಾಗಿ ನಿಲ್ಲುವ ಉದ್ದೇಶ ಮಾಡಿಕೊಂಡರೆ ಅಲ್ಲಾಹನು ನಿಮಗೆ ವಝೂ ಮಾಡಲು ಆದೇಶಿಸಿರುವಂತೆ ಮೊದಲು ವಝೂ ಮಾಡಬೇಕು. ನಂತರ, ನೀವು ಪವಿತ್ರ ಖುರ್‌ಆನ್‌ನಿಂದ ಏನನ್ನಾದರೂ ನೆನಪಿಸಿಕೊಂಡರೆ, ಅದನ್ನು ಪಠಿಸಿ, ಇಲ್ಲದಿದ್ದರೆ **ಅಲ್-ಹಮ್ದುಲಿಲ್ಲಾಹ್, ಅಲ್ಲಾಹು ಅಕ್ಬರ್ ಮತ್ತು ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳಿ. ಅನಂತರ ನಿಧಾನವಾಗಿ ರುಕೂಅ್ ಮಾಡಿರಿ. ಅನಂತರ ನೇರವಾಗಿ ನಿಲ್ಲಿರಿ. ಅನಂತರ ಸರಿಯಾದ ರೀತಿಯಲ್ಲಿ ಸಜ್ದ ಮಾಡಿರಿ. ಅನಂತರ ಸಮಾಧಾನದಿಂದ ಕುಳಿತುಕೊಳ್ಳಿರಿ. ಪುನಃ ಸಜ್ದ ಮಾಡಿ ಎದ್ದೇಳಿರಿ. ನೀವು ಹೀಗೆ ಮಾಡಿದರೆ ನಿಮ್ಮ ನಮಾಝ್ ಪೂರ್ತಿಯಾಯಿತು. (ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್-757)

ಅಲ್ಲಾಮಾ ಇಬ್ನ್ ಹಜರ್ ಅಸ್ಕಾನಿ ಅವರು ಈ ಘಟನೆ ನಡೆದ ವ್ಯಕ್ತಿ ಹಜರತ್ ಖಲಾದ್ ಬಿನ್ ರಫಿ ಎಂದು ಹೇಳುತ್ತಾರೆ.

(ಮರ್ಕತ್ ಅಲ್-ಮುಫಾತಿಹ್ ಶರ್ಹ್ ಮಿಶ್ಕಾತ್ ಅಲ್-ಮಸಾಬಿಹ್, ಭಾಗ 2, ಪುಟ 458, ಅಧ್ಯಾಯ ಸಫತ್ ಅಲ್-ಸಲಾತ್, ಹದೀಸ್ ಸಂಖ್ಯೆ. 790 ದಾರ್ ಅಲ್-ಕಿತಾಬ್ ಅಲ್-ಇಲಾಮಿಯಾ ಬೈರುತ್ 2001)

ನಂತರ ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ) ಅವರ ಪ್ರಸ್ತಾವನೆ ಇದೆ. ಖಂದಕ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಅಬ್ಬಾದ್ ಬಿನ್

ಬಿಶ್ರ್(ರ) ಅವರಿಗೆ ಸಂಪೂರ್ಣ ಸೇವೆ ನೀಡಲು ಸೌಭಾಗ್ಯ ಲಭಿಸಿತು. ಹೀಗಾಗಿ, ಹಝ್ರತ್ ಉಮ್ಮೆ ಸಲಮಾ(ರ.ಅ) ಅವರು ಹೇಳುತ್ತಾರೆ ನಾನು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಖಂದಕದಲ್ಲಿದ್ದೆ ಮತ್ತು ಯಾವುದೇ ಸ್ಥಳದಲ್ಲಿ ಅವರಿಂದ ಬೇರ್ಪಟ್ಟಿಲ್ಲ. ರಸೂಲುಲ್ಲಾಹ್(ಸ) ರವರೇ ಖಂದಕದ ಮೇಲ್ವಿಚಾರಣೆ ನಡೆಸುತ್ತಿದ್ದರು. ನಾವು ತೀವ್ರ ಚಳಿಯಲ್ಲಿದ್ದೆವು. ರಸೂಲುಲ್ಲಾಹ್(ಸ) ರವರು ಎದ್ದು ತಮ್ಮ ಡೇರೆಯಲ್ಲಿ ಅಲ್ಲಾಹನು ಅವರಿಗೆ ನೀಡಿದ ಶಕ್ತಿಯನುಸಾರ ನಮಾಝನ್ನು ನಿರ್ವಹಿಸಿದ್ದನ್ನು ನಾನು ನೋಡಿದೆ. ನಂತರ ಅವರು ತಮ್ಮ ಡೇರೆಯ ಹೊರಗೆ ಬಂದು ನೋಡಿದರು. ಸ್ವಲ್ಪ ಹೊತ್ತು ನಿಂತು ನೋಡಿದರು ಅಷ್ಟರಲ್ಲಿ ನಾನು ರಸೂಲುಲ್ಲಾಹ್(ಸ) ಅವರನ್ನು ಖಂದಕದ ಬಳಿ ಸುತ್ತುತ್ತಿರುವುದು ಮುಶ್ರಿಕರ ಕುದುರೆ ಸವಾರರಾಗಿದ್ದಾರೆ. ಅವರನ್ನು ಯಾರು ನೋಡುತ್ತಾರೆ? ಎಂದು ಹೇಳುತ್ತಿರುವುದನ್ನು ನಾನು ಆಲಿಸಿದೆ. ತದನಂತರ ಅವರು(ಸ) ಮತ್ತೆ ಕೂಗಿದರು ಎಲೈ ಅಬ್ಬಾದ್ ಬಿನ್ ಬಿಶ್ರ್! ಅದಕ್ಕೆ ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ) ಹೇಳಿದರು ನಾನು ಹಾಜರಿದ್ದೇನೆ. ಅದಕ್ಕೆ ರಸೂಲುಲ್ಲಾಹ್(ಸ) ನುಡಿದರು ನಿಮ್ಮೊಂದಿಗೆ ಬೇರೆ ಯಾರಾದರು ಇದ್ದಾರೆಯೇ? ಅವರು ಹೌದು ನಾನು ನನ್ನ ಕೆಲವು ಸಂಗಡಿಗರೊಂದಿಗೆ ಇದ್ದೇನೆ ಎಂದು ಉತ್ತರಿಸಿದರು. ನಾವು ನಿಮ್ಮ ಡೇರೆಯ ಸುತ್ತ ಇದ್ದೇವೆ. ಅವರು(ಸ) ಹೇಳಿದರು: ನೀವು ನಿಮ್ಮ ಸಹಚರರೊಂದಿಗೆ ಹೋಗಿ ಖಂದಕವನ್ನು ಸುತ್ತಿ ನೋಡಿರಿ. ಮುಶ್ರಿಕರ ಕೆಲವು ಕುದುರೆ ಸವಾರರು ನಿಮ್ಮನ್ನು ಸುತ್ತುವರೆದಿದ್ದಾರೆ ಮತ್ತು ಅವರು ನಿಮ್ಮ ಅಜಾಗರೂಕತೆಯಿಂದ ಇದ್ದಕ್ಕಿದ್ದಂತೆ ನಿಮ್ಮ ಮೇಲೆ ದಾಳಿ ಮಾಡಲು ಬಯಸುತ್ತಾರೆ. ನಂತರ ಅವರು(ಸ) ದುಆ ಮಾಡಿದರು: ಓ ಅಲ್ಲಾಹ್! ಅವರ ದುಷ್ಟತನವನ್ನು ನಮ್ಮಿಂದ ತೆಗೆದುಹಾಕಿ ಮತ್ತು ಅವರ ವಿರುದ್ಧ ನಮಗೆ ಸಹಾಯ ಮಾಡಿ ಮತ್ತು ಅವರನ್ನು ಸೋಲಿಸಿ. ನಿಮ್ಮನ್ನು ಹೊರತುಪಡಿಸಿ ಯಾರೂ ಅವರನ್ನು ಸೋಲಿಸಲು ಸಾಧ್ಯವಿಲ್ಲ.

ನಂತರ ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ) ತಮ್ಮ ಸಂಗಡಿಗರೊಂದಿಗೆ ಹೊರಬಂದು ಅಬುಸುಫ್ಯಾನ್ ಬಹುದೇವತಾವಾದಿಗಳ ಕೆಲವು ಕುದುರೆ ಸವಾರರ ಜೊತೆಯಲ್ಲಿದ್ದುದನ್ನು ಮತ್ತು ಅವನು ಖಂದಕದ ಕಿರಿದಾದ ಸ್ಥಳದಲ್ಲಿ ಸುತ್ತುತ್ತಿರುವುದನ್ನು ನೋಡಿದರು ಮತ್ತು ಅಲ್ಲಿ ಆ ದಡದಲ್ಲಿ ಕುಳಿತಿದ್ದ ಮುಸ್ಲಿಮರಿಗೆ ಅವರ ಅರಿವಾಯಿತು. ಅವರು, ಮುಸ್ಲಿಮರು, ಅವರ ಮೇಲೆ ಕಲ್ಲು ಮತ್ತು ಬಾಣಗಳನ್ನು ಎಸೆದರು. ನಂತರ ನಾವು ಸಹ ಅವರೊಂದಿಗೆ ನಿಂತಿದ್ದೇವೆ ಮತ್ತು ನಾವು ಅವರ ಮೇಲೆ ಬಾಣಗಳನ್ನು ಎಸೆದೆವು ಮತ್ತು ನಾವು ಮುಶ್ರಿಕರನ್ನು ಬಾಣಗಳನ್ನು ಎಸೆಯುವ ಮೂಲಕ ಅವರ ಸ್ಥಳಗಳಿಂದ ದೂರ ಸರಿಯುವಂತೆ ಒತ್ತಾಯಿಸಿದೆವು ಮತ್ತು ಅವರು ತಮ್ಮ ವಾಸಸ್ಥಳಕ್ಕೆ ಮರಳಿದರು ಮತ್ತು ನಾನು ಹಝ್ರತ್ ಪೈಗಂಬರ್(ಸ) ಅವರ ಕಡೆಗೆ ಮರಳಿದಾಗ ಅವರು ನಮಾಝ್ ನಿರ್ವಹಿಸುತ್ತಿದ್ದರು. ನಂತರ ನಾನು ಅವರಿಗೆ(ಸ) ಈ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದೆ. ಹಝ್ರತ್ ಉಮ್ಮೆ ಸಲಮಾ(ರ) ಅವರು ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಅವರು ನಾನು ಅವರ ಉಸಿರಾಟದ ಶಬ್ದವನ್ನು ಕೇಳುವವರೆಗೂ ನಿದ್ರೆಗೆ ಜಾರಿದರು ಮತ್ತು ನಾನು ಹಝ್ರತ್ ಬಿಲಾಲ್(ರ) ಅವರು ಅಝಾನ್ ಕೂಗುವರೆಗೂ ಅವರು ಎಚ್ಚರಗೊಳ್ಳಲಿಲ್ಲ. ಮತ್ತು ಫಜರ್ ಸಮಯವಾಯಿತು. ತದನಂತರ ರಸೂಲುಲ್ಲಾಹ್(ಸ)ರವರು ಹೊರಗೆ ಬಂದು ಮುಸ್ಲಿಮರನ್ನು ಪ್ರಾರ್ಥನೆಗೆ ನಮಾಜ್ ನಿರ್ವಹಿಸಿಕೊಟ್ಟರು. ಹಝ್ರತ್ ಉಮ್ಮೇ ಸಲ್ಮಾ(ರ) ವರದಿ ಮಾಡುತ್ತಾರೆ: ಅಲ್ಲಾಹನು ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ)ರ ಮೇಲೆ ಕೃಪೆದೋರಲಿ. ಸಹಾಬಿಯರಲ್ಲಿ ಅತ್ಯಂತ ಹೆಚ್ಚಾಗಿ ಅವರು ಹಝ್ರತ್ ಪೈಗಂಬರ್(ಸ)ರ ಡೇರೆಯ ಸಮೀಪವಿರುತ್ತಿದ್ದರು ಮತ್ತು ಯಾವಾಗಲೂ ಅದರ ಸಂರಕ್ಷಣೆ ಮಾಡುತ್ತಿದ್ದರು. (ಕಿತಾಬುಲ್ ಮಗಾಝಿ ಲಿಲ್ವಾಖಿದಿ, ಭಾಗ–1, ಪುಟ–396–397, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012ರಲ್ಲಿ ಪ್ರಕಟವಾಯಿತು)

ಹಝ್ರತ್ ಆಯಿಷಾ(ರ) ಅವರು ಅನ್ಸಾರ್‌ಗಳ ಪೈಕಿ ಮೂವರು ವ್ಯಕ್ತಿಗಳು ತಮ್ಮ ಶ್ರೇಷ್ಠತೆಗೆ ಉತ್ತರದಾಯಿಯಲ್ಲ, ಅಂದರೆ ಹಝ್ರತ್ ಉಸೈದ್ ಬಿನ್ ಅಲ್–ಹುದೈರ್, ಹಝ್ರತ್ ಸಾಅದ್ ಬಿನ್ ಮುಆದ್ ಮತ್ತು ಹಝ್ರತ್ ಅಬ್ಬಾದ್ ಬಿನ್ ಬಿಶ್ರ್ ಎಂದು ಹೇಳುತ್ತಿದ್ದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–229)

ಖಿಬ್ಲಾ ಪಾಲನೆಗೆ ಸಂಬಂಧಿಸಿದಂತೆ ವರದಿ ಇದೆ. ಅದರಲ್ಲಿ ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ) ಹೆಸರೂ ಬರುತ್ತದೆ. ಹಝ್ರತ್ ತುವೈಲ(ರ) ಹೇಳುತ್ತಾರೆ: ನಾವು ಬನೂ ಹಾರಿಸದಲ್ಲಿ ಝುಹ್ರ್ ಅಥವಾ ಅಸ್ರ್ ನಮಾಝ್ ನಿರ್ವಹಿಸುತ್ತಿದ್ದೆವು. ಮತ್ತು ಬೈತ್ ಅಲ್–ಮುಖದ್ದಸ್ ಕಡೆಗೆ ಎರಡು ರಕಅತ್‌ಗಳನ್ನು ನಿರ್ವಹಿಸಿದ್ದೆವು ಅಷ್ಟರಲ್ಲಿ ಓವ್ ವ್ಯಕ್ತಿ ಬಂದು ನಮಗೆ ಖಿಬ್ಲಾ ಮಸ್ಜಿದ್ ಅಲ್–ಹರಾಮ್ ಕಡೆಗೆ ತಿರುಗಿಸಲಾಗಿದೆ ಎಂದು ತಿಳಿಸಿದನು. ಅವರು ಹೇಳುತ್ತಾರೆ: ನಂತರ ನಾವು ಸ್ಥಳಗಳನ್ನು ಬದಲಾಯಿಸಿದೆವು ಮತ್ತು ಪುರುಷರು ಮಹಿಳೆಯರ ಸ್ಥಳಕ್ಕೆ ಮತ್ತು ಮಹಿಳೆಯರು ಪುರುಷರ ಸ್ಥಳಕ್ಕೆ ತೆರಳಿದೆವು. ಒಂದು ವರದಿಯ ಪ್ರಕಾರ, ಈ ಮಾಹಿತಿಯನ್ನು ನೀಡಿದ ವ್ಯಕ್ತಿಯ ಹೆಸರು ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ) ಬಿನ್ ಖೈಝಿ ಆಗಿದ್ದರು. ಅವರು ಬನೂ ಹಾರಿಸಾ ಗೋತ್ರಕ್ಕೆ ಸಂಬಂಧಿಸಿದ್ದರು, ಮತ್ತೊಂದು ವರದಿಯ ಪ್ರಕಾರ, ಈ ವ್ಯಕ್ತಿ ಬನೂ ಅಬ್ದುಲ್‌ಅಶ್‌ಹಲ್‌ಗೆ ಸೇರಿದ ಅಬ್ಬಾದ್ ಬಿನ್ ಬಿಶ್ರ್ ಬಿನ್ ವಕ್ಷ್ ಆಗಿದ್ದರು. (ಉಸದ್ ಅಲ್–ಗಾಬಾ ಫಿ ಮಾರಿಫತ್ ಅಲ್–ಸಹಾಬಾ, ಭಾಗ–3, ಪುಟಗಳು 148–149, ದಾರ್ ಅಲ್‌ಕುತುಬ್ ಇಲ್‌ಮಿಯ ಬೈರೂತ್) (ಸೈರ್ ಅಲ್‌ಲಾಮುನ್ನಬ್‌ಲಾ ಅಲ್ ಇಮಾಮುಝ್ಝಹಬಿ, ಭಾಗ–1, ಪುಟ–339, ಅರ್‌ರಿಸಾಲತುಲ್ ಆಲಮೀಯತುತ್ತಬಅ ಅಸ್ಸಾನಿಯ 2014)

ಹುದೈಬಿಯಾ ಸಂಧಾನದ ಸಂದರ್ಭದಲ್ಲಿ, ಸುಹೈಲ್ ಬಿನ್ ಅಮ್ರ್ ಮಕ್ಕಾದ ಖುರೈಶಿಗಳಿಂದ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಮಾತನಾಡುವ ಉದ್ದೇಶದಿಂದ ಬಂದಾಗ, ಹಝ್ರತ್ ಅಬ್ಬಾದ್ ಬಿನ್ ಬಿಶ್ರ್ ಸಹ ಹಝ್ರತ್ ಪೈಗಂಬರ್(ಸ) ಅವರ ಪಕ್ಕದಲ್ಲಿ ಕಬ್ಬಿಣದ ಕವಚವನ್ನು ಧರಿಸಿ ಆ ಸಮಯದಲ್ಲಿ ನಿಂತಿದ್ದರು. ಮತ್ತು ಅವರ ಜೊತೆಯಲ್ಲಿ ಮತ್ತೊಬ್ಬ ಸಹಚರರಾದ ಹಝ್ರತ್ ಸಲಮಾ ಬಿನ್ ಅಸ್ಲಂ(ರ) ಕೂಡ ಇದ್ದರು. ಸಂಭಾಷಣೆಯ ಸಮಯದಲ್ಲಿ, ಸೊಹೈಲ್ ಅವರ ಧ್ವನಿ ಎತ್ತಿದಾಗ, ಹಝ್ರತ್ ಅಬ್ಬಾದ್ ಬಿನ್ ಬಿಶ್ರ್ ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮುಂದೆ ತಮ್ಮ ಧ್ವನಿಯನ್ನು ಕಡಿಮೆ ಮಾಡಲು ಹೇಳಿದರು. (ಸಬ್ಲುಲ್–ಹುದಾ ವರ್‌ರಶ್ಶಾದ್, ಭಾಗ–5, ಪುಟ–52, ದಾರುಲ್ ಕುತುಬ್ ಇಲ್ಮಿಯ, ಬೈರುತ್)

ಹಝ್ರತ್ ಅಬ್ಬಾದ್ ಬಿನ್ ಬಿಶ್ರ್(ರ) ಪ್ರತಿ ಯುದ್ಧಗಳ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದರು. ಉಯ್ಯೈನಹ್ ಬಿನ್ ಹಿಸ್ನ್ ಘಝಾರಿ, ಬನೂ ಗತ್‌ಫಾನ್‌ನ ಕೆಲವು ಕುದುರೆ ಸವಾರರೊಂದಿಗೆ, ರಸೂಲುಲ್ಲಾಹ್(ಸ) ಅವರ ಹಾಲು ನೀಡುವ ಒಂಟೆಗಳು ಮೇಯಲು ಬಳಸುತ್ತಿದ್ದ ಕಾಡಿನ ಮೇಲೆ ದಾಳಿ ಮಾಡಿದಾಗ. ಅವರು ಒಂಟೆಗಳನ್ನು ವೀಕ್ಷಿಸುವ ನಿರ್ದಿಷ್ಟ ವ್ಯಕ್ತಿಯನ್ನು ಕೊಂದರು ಮತ್ತು ಅವರ ಪತ್ನಿ ಮತ್ತು ರಸೂಲುಲ್ಲಾಹ್(ಸ)ರವರ ಒಂಟೆಗಳನ್ನು ತೆಗೆದುಕೊಂಡು ಹೋದರು. ಈ ಸುದ್ದಿ ಮದೀನದಲ್ಲಿ ತಲುಪಿದಾಗ, ಕುದುರೆ ಸವಾರರು ರಸೂಲುಲ್ಲಾಹ್(ಸ) ರವರ ಸೇವೆಗೆ ಹಾಜರಾಗಲು ಪ್ರಾರಂಭಿಸಿದರು. ಅನ್ಸಾರರಲ್ಲಿ ಹಝ್ರತ್ ಮಿಖ್ದಾದ್ ಬಿನ್ ಅಸ್ವದ್(ರ.ಅ) ಅವರ ನಂತರ ಹಝ್ರತ್ ಅಬ್ಬದ್ ಬಿನ್ ಬಿಶ್ರ್(ರ.ಅ) ರಸೂಲುಲ್ಲಾಹ್(ಸ.ಅ) ಅವರನ್ನು ಮೊದಲು ತಲುಪಿದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಭಾಗ–3–4, ಪುಟ–174–175, ದಾರುಲ್ ಕುತುಬ್ ಅಲ್ ಅರಬೀಯ ಬೈರೂತ್ 2008)

ಈ ಅಭಿಯಾನವನ್ನು ಗಜ್ವಾ ಧಿ ಕರ್ದ್ ಎಂದು ಕರೆಯಲಾಗುತ್ತದೆ. ಇದನ್ನು ಸಹೀಹ್ ಬುಖಾರಿಯಲ್ಲಿ ವಿವರಿಸಲಾಗಿದೆ. ಯಝೀದ್ ಬಿನ್ ಅಬಿ ಉಬೈದ್ ಅವರು ಹೇಳಿದರು: ಹಝ್ರತ್ ಸಲಮಾ ಬಿನ್ ಅಕೂ(ರ) ರವರು ಹೇಳುವುದನ್ನು ನಾನು ಕೇಳಿದ್ದೇನೆ: ನಾನು ಫಜ್ರ್ ನಮಾಝ್ ಕರೆಗೆ ಮುಂಚಿತವಾಗಿ ಮದೀನಾವನ್ನು ತೊರೆದು ಕಾಡಿಗೆ ಹೋಗಿದ್ದೆ. ರಸೂಲುಲ್ಲಾಹ್(ಸ) ಅವರ ಹಾಲಿನ ಒಂಟೆಗಳು ಧಿ–ಕುರ್ದ್‌ನಲ್ಲಿ ಮೇಯುತ್ತಿದ್ದವು. ದಾರಿಯಲ್ಲಿ ನಾನು ಅಬ್ದ್ ಅಲ್–ರಹಮಾನ್ ಬಿನ್ ಔಫ್(ರ) ಅವರ ಹುಡುಗನನ್ನು ಭೇಟಿಯಾದೆ. ಅವರು ರಸೂಲುಲ್ಲಾಹ್(ಸ)ರವರ ಒಂಟೆಗಳನ್ನು ತೆಗದುಕೊಂಡಿದ್ದಾರೆ ಎಂದು ಹೇಳಿದರು. ನಾನು ಹೇಳಿದೆ ಯಾರು ತೆಗೆದುಕೊಂಡಿದ್ದಾರೆ? ಘತ್‌ಫಾನ್‌ನ ಜನ ಎಂದರು. ಇದನ್ನು ಕೇಳಿದ ಮೇಲೆ ನಾನು ಮೂರು ಬಾರಿ ಯಾ ಸಬಾಹ್ ಎಂದು ಜೋರಾದ ಧ್ವನಿಯಲ್ಲಿ ಹೇಳಿದೆ ಮತ್ತು ಮದೀನಾದ ಎರಡು ಬಂಡೆಗಳ ಬಯಲುಗಳಲ್ಲಿದ್ದವರಿಗೆ ಅದನ್ನು ತಲುಪಿಸಿದೆ. ನಂತರ ದರೋಡೆಕೋರರು ಹೋಗುವವರೆಗೂ ಅವರ ಮುಂದೆ ಓಡಿದರು ಮತ್ತು ಅವರು ಪ್ರಾಣಿಗಳಿಗೆ ಆಹಾರವನ್ನು ನೀಡುತ್ತಿದ್ದರು. ನಾನು ಅವರನ್ನು ಬಾಣಗಳಿಂದ ಹೊಡೆದೆ ಮತ್ತು ನಾನು ಉತ್ತಮ ಬಿಲ್ಲುಗಾರನಾಗಿದ್ದೆ. ನಾನು ಅಕುವಿನ ಪುತ್ರನಗಿದ್ದೇನೆ, ಇವತ್ತು ಹಾಲುಣಿಸುವವರು ಹಾಲನ್ನು ಯಾರಿಗೆ ಉಣಿಸಿದ್ದಾರೆ ಎಂದು ಅರ್ಥವಾಗುವ ದಿನವಾಗಿದೆ. ಮತ್ತು ಹಾಲಿನ ಒಂಟೆಗಳೆಲ್ಲವೂ ಅವುಗಳಿಂದ ಮುಕ್ತಿ ಪಡೆಯುವವರೆಗೆ ಘರ್ಜಿಸುತ್ತಾ ಈ ರಜ್ಜಿಯ ಕವಿತೆಯನ್ನು ಹೇಳುತ್ತಿದ್ದೆ ಮತ್ತು ಅವುಗಳಿಂದ ಮೂವತ್ತು ಚಾದರಗಳನ್ನು ತೆಗೆದುಕೊಂಡೆವು. ಅಷ್ಟರಲ್ಲಿ ರಸೂಲುಲ್ಲಾಹ್(ಸ) ರವರು ಇತರ ಜನರೊಂದಿಗೆ ಆಗಮಿಸಿದಾಗ ನಾನು ಅದೇ ಪರಿಸ್ಥಿತಿಯಲ್ಲಿದ್ದೆ

ಎಂದು ಅವರು ಹೇಳುತ್ತಿದ್ದರು. ನಾನು ಹೇಳಿದೆ, ನಬಿ ಅಲ್ಲಾಹ್! ನಾನು ಈ ಜನರಿಗೆ ನೀರು ಕುಡಿಯಲು ಬಿಡಲಿಲ್ಲ ಮತ್ತು ಅವರು ಬಾಯಾರಿದರು. ಈ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಸೈನ್ಯವನ್ನು ಕಳುಹಿಸಿದ್ದರು. ಅವರು(ಸ) ಹೇಳಿದರು: ಅಕುವಿನ ಪುತ್ರನೇ!! ನೀನು ಅವರನ್ನು ಜಯಿಸಿರುವೆ, ಆದ್ದರಿಂದ ಸೌಮ್ಯವಾಗಿರು.

ಹಝ್ರತ್ ಅಕು(ರ) ಹೇಳುತ್ತಿದ್ದರು, ನಂತರ ನಾವು ಹಿಂತಿರುಗಿದೆವು ಮತ್ತು ರಸೂಲುಲ್ಲಾಹ್(ಸ) ಅವರು ನನ್ನನ್ನು ಅವರ ಹಿಂದೆ ಅವರ ಒಂಟೆಯ ಮೇಲೆ ಕುಳಿತುಕೊಳ್ಳುವಂತೆ ಮಾಡಿದರು ಮತ್ತು ನಾವು ಆ ಸ್ಥಿತಿಯಲ್ಲಿ ಮದೀನಾವನ್ನು ಪ್ರವೇಶಿಸಿದ್ದೇವೆ.

(ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಮಘಾಜಿ, ವರದಿ ಸಂಖ್ಯೆ-4194)

ಮುಂದಿನದ್ದು ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ)ರ ಪ್ರಸ್ತಾಪವಾಗಿದೆ. ಹಿಜರೀ 30ರಲ್ಲಿ 65ನೇ ವಯಸ್ಸಿನಲ್ಲಿ, ಮದೀನದಲ್ಲಿ ಅವರ ನಿಧನವಾಗಿತ್ತು. ಹಝ್ರತ್ ಉಸ್ಮಾನ್(ರ) ಅವರ ಜನಾಝ ನಮಾಝನ್ನು ನಿರ್ವಹಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಸಂಪುಟ-3, ಪುಟ-84, ದಾರುಲ್ ಕುತುಬ್ ಇಲ್ಮಿಯ 1990)

ಹಝ್ರತ್ ಅಬುಬಕರ್(ರ) ಅವರನ್ನು ಈಜಿಪ್ಟ್‌ನಲ್ಲಿರುವ ಮುಖೌಖಿಸ್‌ಗೆ ಕಳುಹಿಸಿದರು ಮತ್ತು ಹಝ್ರತ್ ಅಮ್ರೋ ಬಿನ್ ಆಸ್(ರ) ಈಜಿಪ್ಟ್‌ನ ಆಕ್ರಮಣದವರೆಗೂ ಪಕ್ಷಗಳ ನಡುವೆ ಒಪ್ಪಂದವನ್ನು ಏರ್ಪಡಿಸಿದರು ಎಂದು ಅವರ ಬಗ್ಗೆ ಬರೆಯಲಾಗಿದೆ.

(ಅಲ್ಇಸ್ತಿಯಾಬ್ ಫೀ ಮಾರಿಫತಿಸ್ಸಹಾಬ, ಸಂಪುಟ-1, ಪುಟ-314, ದಾರುಲ್ ಜೀಲ್ ಬೈರೂತ್ 1992)

ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಅವರು ಸುಂದರವಾದ ಮೈಕಟ್ಟನ್ನು ಹೊಂದಿದ್ದರು. ಅವರು ತಿಳಿ ಗಡ್ಡವನ್ನು ಹೊಂದಿದ್ದರು. ಕತ್ತು ಬಗ್ಗಿತ್ತು. ಅವರು ಗಿಡ್ಡನಾಗಿದ್ದರು ಮತ್ತು ದಪ್ಪ ಬೆರಳುಗಳನ್ನು ಹೊಂದಿದ್ದರು. ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಅವರು ತಮ್ಮ ಮರಣದ ದಿನದಂದು ನಾಲ್ಕು ಸಾವಿರ ದಿನಾರ್‌ಗಳು ಮತ್ತು ದಿರ್ಹಮ್‌ಗಳನ್ನು ಬಿಟ್ಟುಹೋದರು ಎಂದು ಯಾಕುಬ್ ಬಿನ್ ಉತ್ಬಾರಿಂದ ವರದಿಯಾಗಿದೆ. ಅವರು ಧಾನ್ಯ ಇತ್ಯಾದಿಗಳ ವ್ಯಾಪಾರಿಯಾಗಿದ್ದರು ಮತ್ತು ಅವರು ಮದೀನಾದಲ್ಲಿ ತಮ್ಮ ಸಂಪತ್ತನ್ನು ತೊರೆದರು.

ಹಝ್ರತ್ ಜಾಬಿರ್(ರ) ಅವರು ಹೇಳುತ್ತಾರೆ: ಒಮ್ಮೆ ಹಾತಿಬ್ ಅವರ ಗುಲಾಮನು ರಸೂಲುಲ್ಲಾಹ್(ಸ) ಅವರ ಬಳಿ ಅವರ(ರ) ದೂರನ್ನು ಹೊಂದಿದ್ದನು. ಗುಲಾಮ ಹೇಳಿದರು, ಓ ಅಲ್ಲಾಹನ ಸಂದೇಶವಾಹಕರೇ! ಹಾತಿಬ್ ಖಂಡಿತವಾಗಿಯೂ ನರಕವನ್ನು ಪ್ರವೇಶಿಸುತ್ತಾನೆ. ಇದಕ್ಕೆ ರಸೂಲುಲ್ಲಾಹ್(ಸ) ರವರು ಹೇಳಿದರು: ನೀವು ಸುಳ್ಳು ಹೇಳಿದ್ದೀರಿ. ಅವರು ಬದ್ರ್ ಯುದ್ಧ ಮತ್ತು ಹುದೈಬಿಯಾ ಸಂಧಾನದಲ್ಲಿ ಭಾಗಿಯಾಗಿದ್ದರು. ಆದ್ದರಿಂದ ಅವರು ಎಂದಿಗೂ ಪ್ರವೇಶಿಸುವುದಿಲ್ಲ.

ಹಝ್ರತ್ ಸಯೀದ್ ಬಿನ್ ಮುಸೈಯಿಬ್(ರ) ರವರು ಹೇಳುತ್ತಾರೆ: ಹಝ್ರತ್ ಉಮರ್(ರ) ಅವರು ಮಾರುಕಟ್ಟೆಯಲ್ಲಿ ಒಣದ್ರಾಕ್ಷಿಗಳನ್ನು ಮಾರಾಟ ಮಾಡುವಾಗ ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಅವರ ಬಳಿಯಿಂದ ಹಾದುಹೋದರು. ಹಝ್ರತ್ ಉಮರ್(ರ) ಹೇಳಿದರು, ಒಂದೋ ನೀವು ನಿಮ್ಮ ಬೆಲೆಯನ್ನು ಹೆಚ್ಚಿಸಿ ಅಥವಾ ನಮ್ಮ ಮಾರುಕಟ್ಟೆಯನ್ನು ಬಿಡಿ. ಈದ್ಗಾದ ಮಾರುಕಟ್ಟೆಯಲ್ಲಿ ಹಝ್ರತ್ ಉಮರ್(ರ) ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಅವರ ಬಳಿಯಿಂದ ಹಾದುಹೋದರು ಎಂದು ಖಾಸಿಮ್ ಬಿನ್ ಮುಹಮ್ಮದ್ ಹೇಳುತ್ತಾರೆ ಎಂದು ಹಝ್ರತ್ ಇಮಾಮ್ ಶಾಫಿ(ರ) ಅವರಿಂದ ವರದಿಯಾಗಿದೆ ಎಂದು ಬರೆಯಲಾಗಿದೆ. ಅವರ ಮುಂದೆ ಒಣದ್ರಾಕ್ಷಿ ತುಂಬಿದ ಎರಡು ಬುಟ್ಟಿಗಳಿದ್ದವು. ಹಝ್ರತ್ ಉಮರ್(ರ) ಅವರ ದರವನ್ನು ಕೇಳಿದರು, ಮತ್ತು ಅವರು ಹೇಳಿದರು, "ನಾನು ಒಂದು ದಿರ್ಹಮ್ನಲ್ಲಿ ಎರಡು (ಮುದ್) ಕಂತುಗಳನ್ನು ನೀಡುತ್ತಿದ್ದೇನೆ." ಹಝ್ರತ್ ಉಮರ್(ರ) ಅವರಿಗೆ ಹೇಳಿದರು: ನನಗೆ ತಾಯಿಫ್‌ನಿಂದ ಬರುವ ವ್ಯಪಾರ ತಂಡದ ಬಗ್ಗೆ ನನಗೆ ತಿಳಿಸಲಲಾಗಿದೆ ಅವರು ನಿಮ್ಮ ದರವನ್ನು ನಂಬುತ್ತಾರೆ. ಆದ್ದರಿಂದ ಒಂದೋ ನೀವು ಬೆಲೆ ಹೆಚ್ಚಿಸಿ ಇಲ್ಲವೇ ಮನೆಯಲ್ಲಿ ಕುಳಿತು ಇಷ್ಟ ಬಂದಂತೆ ಮಾರಾಟ ಮಾಡಿ. ಹೀಗಾಗಿ ಹಝ್ರತ್ ಉಮರ್(ರ)ರವರು ಮನೆಗೆ ಬಂದು ಸಮಾಲೋಚಿಸಿದಾಗ ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಅವರ ಮನೆಗೆ ಅವರು ಪುನಃ ಭೇಟಿ ನೀಡಿ ಹೇಳಿದರು ನಾನು ನಿಮಗೆ ಹೇಳಿದ್ದು ನನ್ನಿಂದ ಬಲವಂತವಾಗಿಲ್ಲ ಅಥವಾ ನನ್ನ ಕಡೆಯಿಂದ ನಿರ್ಧಾರವಾಗಿಲ್ಲ. ನಾನು ಇದನ್ನು ನಾಗರಿಕರ ಕಲ್ಯಾಣಕ್ಕಾಗಿ ಮಾಡಿದ್ದೇನೆ. ನಿಮಗೆ ಎಲ್ಲಿ ಬೇಕಾದರೂ ಮಾರಾಟ ಮಾಡಿ ಮತ್ತು ನಿಮಗೆ ಬೇಕಾದಷ್ಟು ಮಾರಾಟ ಮಾಡಿ.

(ಅಲ್‌ಸನನ್ ಅಲ್‌ಕಿಬ್ರ ಲಿಲ್ ಬೈಹಖಿ, ಭಾಗ-6, ಹದೀಸ್-11146, ಪುಟ-48, ದರುಲ್ ಕುತುಬ್ ಇಲ್ಮಿಯ 2003)

ಈ ಬಗ್ಗೆ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ "ರಸೂಲುಲ್ಲಾಹ್(ಸ) ಅವರ ಕಾಲದಿಂದಲೂ, ಇಸ್ಲಾಮಿಕ್ ಸರ್ಕಾರವು ಮದೀನಾದಲ್ಲಿ ಬೆಲೆಗಳನ್ನು ನಿಯಂತ್ರಿಸುತ್ತಿತ್ತು. ಹದೀಸಿನಲ್ಲಿ ಉಲ್ಲೇಖಿಸಲಾಗಿದೆ, ಒಮ್ಮೆ ಹಝ್ರತ್ ಉಮರ್(ರ) ರವರು ಮದೀನದ ಮಾರುಕಟ್ಟೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಎಂಬ ವ್ಯಕ್ತಿಯನ್ನು ಕಂಡರು. ಆತನು ಒಣಗಿದ ದ್ರಾಕ್ಷಿಯ ಎರಡು ಚೀಲಗಳು ಇಟ್ಟುಕೊಂಡಿದ್ದನು. ಹಝ್ರತ್ ಉಮರ್(ರ) ಅವರನ್ನು ಬೆಲೆಯ ಬಗ್ಗೆ ಕೇಳಿದರು, ಅದಕ್ಕೆ ಅವರು ಒಂದು ದಿರ್ಹಮ್‌ನ ಎರಡು ಕಂತುಗಳನ್ನು ಎಂದು ಹೇಳಿದರು. ಈ ಬೆಲೆಯೂ ಮಾರುಕಟ್ಟೆಯ ಸಾಮಾನ್ಯ ಬೆಲೆಗಿಂತ ಅಗ್ಗವಾಗಿತ್ತು. ಈ ಬಗ್ಗೆ ಅವರು ತಮ್ಮ ಮನೆಗಳಿಗೆ ಹೋಗಿ ಮಾರಾಟ ಮಾಡಲು ಆದೇಶಿಸಿದರು, ಆದರೆ ಅವರು ಮಾರುಕಟ್ಟೆಯಲ್ಲಿ ಅಂತಹ ಅಗ್ಗದ ಬೆಲೆಗೆ ಮಾರಾಟ ಮಾಡಲು ಅನುಮತಿಸುವುದಿಲ್ಲ, ಏಕೆಂದರೆ ಇದು ಮಾರುಕಟ್ಟೆಯ ಬೆಲೆಯನ್ನು ಹಾಳು ಮಾಡುತ್ತದೆ ಮತ್ತು ಮಾರುಕಟ್ಟೆಯ ಜನರ ಮೇಲೆ ಜನರಿಗೆ ಅಪನಂಬಿಕೆಯನ್ನು ಉಂಟುಮಾಡುತ್ತದೆ. ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು, "ನ್ಯಾಯಶಾಸ್ತ್ರಜ್ಞರು ಇದರ ಬಗ್ಗೆ ದೊಡ್ಡ ಚರ್ಚೆಗಳನ್ನು ನಡೆಸಿದ್ದಾರೆ." ಕೆಲವರು ಹಝ್ರತ್ ಉಮರ್(ರ) ನಂತರ ತಮ್ಮ ಅಭಿಪ್ರಾಯಕ್ಕೆ ಹಿಂದಿರುಗಿದ ಅಂತಹ ವರದಿಗಳನ್ನು ಉಲ್ಲೇಖಿಸಿದ್ದಾರೆ, ಆದರೆ ಸಾಮಾನ್ಯವಾಗಿ ನ್ಯಾಯಶಾಸ್ತ್ರಜ್ಞರು ಹಝ್ರತ್ ಉಮರ್(ರ) ಅವರ ಅಭಿಪ್ರಾಯವನ್ನು ಕಾರ್ಯಸಾಧ್ಯವಾದ ಮೂಲವೆಂದು ಗುರುತಿಸಿದ್ದಾರೆ ಮತ್ತು ಅವರು ಇಸ್ಲಾಮಿಕ್ ಸರ್ಕಾರದ ಈ ಕರ್ತವ್ಯವನ್ನು ಅವರು ದರವನ್ನು ನಿಗದಿಪಡಿಸಬೇಕು ಎಂದು ಬರೆದಿದ್ದಾರೆ. ಜನಂಗದ ನೈತಿಕತೆ ಮತ್ತು ಪ್ರಾಮಾಣಿಕತೆಯಲ್ಲಿ ವ್ಯತ್ಯಾಸವಾಗುತ್ತದೆ. ಮಾರುಕಟ್ಟೆಯಲ್ಲಿ ತರದ ಮತ್ತು ವೈಯುಕ್ತಿಕ ಸ್ಥಾನಮಾನವನ್ನು ಹೊಂದಿರುವ ವಸ್ತುಗಳನ್ನು ಇಲ್ಲಿ ಉಲ್ಲೇಖಿಸಲಾಗಿಲ್ಲ. ಹಾಗಾಗಿ ಮಾರುಕಟ್ಟೆಯಲ್ಲಿ ತಂದು ಮಾರುವ ವಸ್ತುಗಳಿಗೆ ಸಂಬಂಧಿಸಿದಂತೆ ಇಸ್ಲಾಂ ಧರ್ಮದಲ್ಲಿ ಯಾವುದೇ ಅಂಗಡಿಯವರು ಬೆಲೆಯನ್ನು ಕಡಿಮೆ ಮಾಡದಂತೆ ದರ ನಿಗದಿಪಡಿಸಬೇಕು ಎಂಬ ಸ್ಪಷ್ಟ ಆದೇಶವಿದೆ. ಆದ್ದರಿಂದ, ಕೆಲವು ಕೃತಿಗಳು ಮತ್ತು ಹದೀಸ್‌ಗಳನ್ನು ಸಹ ಅದನ್ನು ಬೆಂಬಲಿಸುವ ನ್ಯಾಯಶಾಸ್ತ್ರಜ್ಞರು ಬರೆದಿದ್ದಾರೆ."

(ಖುತ್ಬತೆ ಮಹ್ಮೂದ್, ಸಂಪುಟ-19, ಪುಟಗಳು 307-308, ಖುತ್ಬಾ 10 ಜೂನ್ 1938)

ಇಲ್ಲಿ ಸ್ಪರ್ಧೆಯಲ್ಲಿ ಮತ್ತೆ ಒಬ್ಬರನ್ನೊಬ್ಬರು ನಷ್ಟವನ್ನುಂಟು ಮಾಡಲು ಪ್ರಯತ್ನಿಸುತ್ತಾರೆ ಆದ್ದರಿಂದ ಒಂದೇ ದರವಿರಬೇಕು.

5 ಹಿಜರಿಯಲ್ಲಿ ಬಾನು ಮುಸ್ತಲಕ್ ದಂಡಯಾತ್ರೆಯಿಂದ ಹಿಂದಿರುಗುವಾಗ, ಹಝ್ರತ್ ಪೈಗಂಬರ್(ಸ) ಅವರು ನಖಿ ಸ್ಥಳದಿಂದ ಹಾದುಹೋದರು ಮತ್ತು ಅಲ್ಲಿ ವಿಶಾಲವಾದ ಪ್ರದೇಶ ಮತ್ತು ಹುಲ್ಲುಗಳನ್ನು ನೋಡಿದರು ಮತ್ತು ಅನೇಕ ಬಾವಿಗಳನ್ನು ನೋಡಿದರು. ಅದಕ್ಕೆ ರಸೂಲುಲ್ಲಾಹ್(ಸ) ಈ ಬಾವಿಗಳ ನೀರಿನ ಬಗ್ಗೆ ಕೇಳಿದರು, ಅದರ ಬಗ್ಗೆ ಹೀಗೆ ಹೇಳಲಾಯಿತು: ಯಾ ರಸೂಲಲ್ಲಾಹ್(ಸ)! ನಾವು ಈ ಬಾವಿಗಳನ್ನು ಹೊಗಳಿದಾಗ ಅವುಗಳ ನೀರು ಕಡಿಮೆಯಾಗಿ ಬಾವಿಗಳು ನಿಶ್ಚಲವಾಗುತ್ತವೆ. ಇದಕ್ಕೆ ರಸೂಲುಲ್ಲಾಹ್(ಸ) ಅವರು ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತಅ(ರ) ಅವರಿಗೆ ಬಾವಿಯನ್ನು ಅಗೆಯಲು ಆದೇಶಿಸಿದರು. ಅವರು(ಸ) ನಖಿಯನ್ನು ಹುಲ್ಲುಗಾವಲು ಮಾಡಲು ಆದೇಶಿಸಿದರು. ಅವರು ಹಝ್ರತ್ ಬಿಲಾಲ್ ಬಿನ್ ಹಾರಿಸ್ ಮುಝ್ನಿ(ರ) ಅವರನ್ನು ಅದರ ಮೇಲ್ವಿಚಾರಕರನ್ನಾಗಿ ನೇಮಿಸಿದರು. ಹಜ್‌ರತ್ ಬಿಲಾಲ್ ಹೇಳಿದರು: ಯಾ ರಸೂಲಲ್ಲಾಹ್(ಸ)! ಈ ಭೂಮಿಯಲ್ಲಿ ಎಷ್ಟು ಭಾಗವನ್ನು ಹುಲ್ಲುಗಾವಲು ಭೂಮಿಯನ್ನು ಮಾಡಬೇಕು? ಅದಕ್ಕೆ ರಸೂಲಲ್ಲಾಹ್(ಸ) ಹೇಳಿದರು: ಬೆಳಗಾದಾಗ, ಗಟ್ಟಿಯಾದ ಧ್ವನಿಯುಳ್ಳ ವ್ಯಕ್ತಿಯನ್ನು ನಿಲ್ಲಿಸಿ. ರಾತ್ರಿಯ ಕತ್ತಲೆಯಲ್ಲಿ, ಶಬ್ದಗಳು ದೂರ ಹೋಗಬಹುದು, ಆದ್ದರಿಂದ ಹಗಲಿನಲ್ಲಿ, ಸೂರ್ಯೋದಯವಾದಾಗ, ಆ ಸಮಯದಲ್ಲಿ, ಒಬ್ಬ ವ್ಯಕ್ತಿಯನ್ನು ಎದ್ದು ನಿಲ್ಲುವಂತೆ ಮಾಡಿ, ನಂತರ ಅವನನ್ನು 'ಮುಕಮಲ್' ಎಂಬ ಬೆಟ್ಟದ ಮೇಲೆ ನಿಲ್ಲುವಂತೆ ಮಾಡಿ ಆತನ ಶಬ್ದವು ಎಲ್ಲಿಯವರೆಗೆ ಕೇಲಿಸುತ್ತದೆಯೋ ಅಲ್ಲಿಯುವರೆಗೆ ಮುಸಲ್ಮಾನರ ಕುದುರೆಗಳು ಮತ್ತು ಒಂಟೆಗಳಿಗಾಗಿ ಹುಲ್ಲುಗಾವಲು ಎನ್ನಾಗಿ ಮಾಡಿ. ಅದರ ಮೂಲಕ ಅವರು ಜಿಹಾದ್ ಮಾಡಬಹುದು. ಅರ್ಥಾತ್ ಜಿಹಾದ್‌ಗಾಗಿ ಮುಸಲ್ಮಾನರ ಬಳಿ ಇರುವ ಕುದುರೆ, ಒಂಟೆಗಳು ಅಲ್ಲಿ ಮೇಯಬೇಕು. ಹಝ್ರತ್ ಬಿಲಾಲ್(ರ) ಹೇಳಿದರು: ಯಾ ರಸೂಲಲ್ಲಾಹ್(ಸ)! ಪ್ರಾಣಿಗಳನ್ನು ಮೇಯಿಸುವ ಬಗ್ಗೆ

ಮುಸ್ಲಿಮರ ಅಭಿಪ್ರಾಯವೇನು? ಮುಸ್ಲಿಮರು ಹೊಂದಿರುವ ಇತರ ಪ್ರಾಣಿಗಳ ಬಗ್ಗೆ (ನಿಮ್ಮ ಅಭಿಪ್ರಾಯವೇನು?) ಅವರು ಹೇಳಿದರು: ಅವರು ಅದನ್ನು ಪ್ರವೇಶಿಸುವುದಿಲ್ಲ, ಜಿಹಾದಿಗೆ ಬಳಸಬೇಕಾದ ಜಿಹಾದಿಗಳು ಮಾತ್ರ ಈ ಸ್ಥಳದಿಂದ ಮೇಯಬಹುದು. ಉಳಿದವರು ತಮ್ಮ ಹುಲ್ಲುಗಾವಲುಗಳಿಗೆ ಹೋಗುತ್ತಾರೆ. ಹಝ್ರತ್ ಬಿಲಾಲ್(ರ) ಹೇಳಿದರು: ಯಾ ರಸೂಲಲ್ಲಾಹ್! ಕಡಿಮೆ ಸಂಖ್ಯೆಯ ಕುರಿ ಮತ್ತು ಮೇಕೆಗಳನ್ನು ಹೊಂದಿರುವ ಮತ್ತು ಅವುಗಳನ್ನು ಚಲಿಸುವ ಶಕ್ತಿಯಿಲ್ಲದ ದುರ್ಬಲ ಪುರುಷ ಅಥವಾ ದುರ್ಬಲ ಮಹಿಳೆಯರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅವರು(ಸ) ಹೇಳಿದರು: ಅವುಗಳನ್ನು ಬಿಡಿ ಮತ್ತು ಅವುಗಳನ್ನು ಮೇಯಲು ಬಿಡಿ.
(ಸಬ್ಲುಲ್ ಹುದಾ ವರ್ರಶ್ಯಾದ್, ಸಂಪುಟ–4, ಪಉಟ–352–353, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1993)

ಇವುಗಳನ್ನು ನಾನು ಇಂದು ವಿವರಿಸಬೇಕಾಗಿತ್ತು. ಕೆಲವು ಬದ್ರೀ ಸಹಾಬರ ಪ್ರಸ್ತಾಪ ಉಳಿದಿದೆ. ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು ಇನ್‌ಶಾ ಅಲ್ಲಾಹ್.

...*...*...*...

*(ಪುಟ ಸಂಖ್ಯೆ **02**ರ ಉಳಿದ ಭಾಗ)*

ಪ್ರಯತ್ನಿಸುತ್ತಾರೆ. ಇಸ್ಲಾಂ ಧರ್ಮವು ಸದ್ಗುಣಗಳಲ್ಲಿ ಸ್ಪರ್ಧೆಯನ್ನು ಸಮರ್ಥಿಸಿದೆ. ಅದಲ್ಲದೆ ಅದನ್ನು ಪ್ರೋತ್ಸಾಹಿಸಿದೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನುಡಿಯುತ್ತಾನೆ: **ವಲಿಕುಲ್ಲಿ ವಿಜ್ಹತುನ್ ಹುವ ಮುವಲ್ಲಿಹಾ ಫಸ್ತಬಿಖುಲ್ ಖೈರಾತ್** (ಅಲ್ ಬಖರ: 149) ಅನುವಾದ: ಪ್ರತಿಯೊಬ್ಬನಿಗೂ ಒಂದೊಂದು ಗುರಿಯಿರುತ್ತದೆ. ಅದು ಅವನ ಮೇಲೆ ಪ್ರಭಾವ ಬೀರುತ್ತದೆ. ನೀವು ಸತ್ಕರ್ಮದಲ್ಲಿ ಮೇಲುಗೈಯಾಗಲು ಸ್ಪರ್ಧಿಸಿರಿ. ನೀವು ಎಲ್ಲಿದ್ದರೂ ಅಲ್ಲಾಹನು ನಿಮ್ಮನ್ನೆಲ್ಲ ಒಂದುಗೂಡಿಸುವನು. ತಾನಿಚ್ಛಿಸುವುದನ್ನೆಲ್ಲ ಮಾಡಲು ಅಲ್ಲಾಹನು ಶಕ್ತನಾಗಿದ್ದಾನೆ.

ಸಯ್ಯಿದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: ಈ ಸ್ಥಳದಲ್ಲಿ, ಒಳ್ಳೆಯ ಕಾರ್ಯಗಳಲ್ಲಿ ಪರಸ್ಪರ ಸ್ಪರ್ಧಿಸಲು ಪ್ರೋತ್ಸಾಹಿಸುವ ಮೂಲಕ, ಸರ್ವಶಕ್ತನಾದ ಅಲ್ಲಾಹನು ರಾಷ್ಟ್ರೀಯ ಅಭಿವೃದ್ಧಿಯ ವಿಚಿತ್ರ ಅಂಶವನ್ನು ವಿವರಿಸಿದ್ದಾನೆ, ದುರದೃಷ್ಟವಶಾತ್, ಇದನ್ನು ಸಾಮಾನ್ಯವಾಗಿ ಪ್ರಸ್ತುತ ಕಾಲದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ.... ಈ ಆಯತ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ವಿಶ್ವಾಸಿಗಳ ಗುರುತಿಸುವಿಕೆಯ ಈ ಮಾನದಂಡವನ್ನು ವಿವರಿಸಿದ್ದಾನೆ, ಅಂದರೆ ಅವರು ಸ್ಪರ್ಧಿಸುತ್ತಾರೆ ಮತ್ತು ಒಳ್ಳೆಯ ಕಾರ್ಯಗಳಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸುತ್ತಾರೆ, ಖಂಡಿತವಾಗಿ ಪ್ರತಿ ರಾಷ್ಟ್ರದ ಗುಣಮಟ್ಟವನ್ನು ಮಾನವನು ಸಹ ಊಹೆ ಮಾಡಲಾರದಷ್ಟು ಎತ್ತರಕ್ಕೆ ಏರಿಸುತ್ತಾನೆ. ಪ್ರಪಂಚದಿಂದ ಒಳ್ಳೆಯತನ ಕಾಣೆಯಾದಾಗ ಅಥವಾ ಒಳ್ಳೆಯತನದಲ್ಲಿ ಮುನ್ನಡೆಯುವ ಮನೋಭಾವವು ಕಾಣೆಯಾದಾಗ, ರಾಷ್ಟ್ರವು ಸಾಯಲು ಪ್ರಾರಂಭಿಸುತ್ತದೆ ಅಥವಾ ಬೀಳಲು ಪ್ರಾರಂಭಿಸುತ್ತದೆ, ಆದರೆ ಎಲ್ಲಿಯವರೆಗೆ ಸ್ಪರ್ಧೆಯ ಮನೋಭಾವವು ರಾಷ್ಟ್ರದಲ್ಲಿ ಉಳಿಯುತ್ತದೆಯೊ ಅದು ಎಷ್ಟು ಅವಮಾನಕ್ಕೊಳಗಾಗಿದ್ದರೂ ಮತ್ತು ಎಷ್ಟು ಕೆಳ ಮಟ್ಟದಲ್ಲಿ ಬಿದ್ದಿದ್ದರು ಪರವಾಗಿಲ್ಲ ಇದರ ಹೊಳಪು ಇನ್ನೂ ಹೊಳೆಯುತ್ತದೆ. ಮತ್ತು ಅದಕ್ಕೆ ಮುಂದುವರಿಯಲು ಅವಕಾಶವಿರುತ್ತದೆ. (ತಫ್ಸೀರ್ ಕಬೀರ್, ಸಂಪುಟ–4, ಪುಟ–256)

ಕೆಳಗೆ ನಾವು ಭಾರತದಲ್ಲಿನ ಜಮಾಅತ್‌ಗಳ 10 ವರ್ಷಗಳ ಸ್ಥಾನವನ್ನು ಉಲ್ಲೇಖಿಸುತ್ತೇವೆ ಇದರಿಂದ ಜಮಾಅತ್‌ಗಳು ತಮ್ಮ ಸ್ಥಾನವನ್ನು ಏನೆಂದು ನೋಡಬಹುದು ಮತ್ತು ಅದಕ್ಕೆ ಅನುಗುಣವಾಗಿ ತ್ಯಾಗದಲ್ಲಿ ಮುಂದುವರಿಯಬಹುದು ಮತ್ತು ಪರಸ್ಪರರನ್ನು ಮೀರಿಸಲು ಪ್ರಯತ್ನಿಸಬಹುದು. **ವಬಿಲ್ಲಾಹಿತ್ತೌಫೀಖ್**

| **2013** | **2014** | **2015** |
|---|---|---|
| ಕರುಲಾಯಿ | ಕರುಲಾಯಿ | ಕರುಲಾಯಿ |
| ಕ್ಯಾಲೀಕಟ್ | ಕಾಲೀಕಟ್ | ಹೈದರಾಬಾದ್ |
| ಹೈದರಾಬಾದ್ | ಹೈದರಾಬಾದ್ | ಕಾಲಿಕಟ್ |
| ಕನ್ನೂರು ಪಟ್ಟಣ | ಖಾದಿಯಾನ್ | ಖಾದಿಯಾನ್ |
| ಪಯಂಗಾಡಿ | ಕನ್ನೂರ್ ಪಟ್ಟಣ | ಪಥಪೆರಿಯಮ್ |
| ಖಾದಿಯಾನ್ | ಪಯಂಗಾಡಿ | ಕನ್ನೂರ್ ಪಟ್ಟಣ |
| ಕಲ್ಕತ್ತಾ | ಸೋಲೂರ್ | ಪಯಂಗಾಡಿ |
| ಯಾದಗಿರಿ | ಕಲ್ಕತ್ತಾ | ಕಲ್ಕತ್ತಾ |
| ಚೆನ್ನೈ | ಚೆನ್ನೈ | ಬೆಂಗಳೂರು |
| ಮಾಥೋಟಮ್ | ಬೆಂಗಳೂರು | ಸೋಲೂರ್ |

| **2016** | **2017** | **2018** |
|---|---|---|
| ಕರುಲಾಯಿ | ಕಾಲಿಕಟ್ | ಖಾದಿಯಾನ್ |
| ಕಾಲಿಕಟ್ | ಪಥಪರಿಯಮ್ | ಹೈದರಾಬಾದ್ |
| ಹೈದರಾಬಾದ್ | ಖಾದಿಯಾನ್ | ಪಥಪೆರಿಯಮ್ |
| ಪಥಪರಿಯಮ್ | ಹೈದರಾಬಾದ್ | ಚೆನ್ನೈ |
| ಖಾದಿಯಾನ್ | ಕಲ್ಕತ್ತಾ | ಕಾಲಿಕಟ್ |
| ಕನ್ನೂರ್ ಪಟ್ಟಣ | ಬೆಂಗಳೂರು | ಬೆಂಗಳೂರು |
| ಪಯಂಗಾಡಿ | ಕನ್ನೂರ್ ಪಟ್ಟಣ | ಕಲ್ಕತ್ತಾ |
| ದೆಹಲಿ | ಪಯಂಗಾಡಿ | ಪಯಂಗಾಡಿ |
| ಕಲ್ಕತ್ತಾ | ಮಾಥೋಟಮ್ | ಕನ್ನೂರ್ ಟೌನ್ |
| ಸೂಲೂರ್ | ಕರುಲಾಯಿ | ಯಾದಗಿರಿ |

| **2019** | **2020** | **2021** |
|---|---|---|
| ಕರುಲಾಯಿ | ಕೊಯಮತ್ತೂರು | ಖಾದಿಯಾನ್ |
| ಖಾದಿಯಾನ್ | ಕರುಲಾಯಿ | ಕೊಯಮತ್ತೂರು |
| ಪಥಪೆರಿಯಮ್ | ಖಾದಿಯಾನ್ | ಹೈದರಾಬಾದ್ |
| ಹೈದರಾಬಾದ್ | ಪಥಪರಿಯಮ್ | ಕರುಲಾಯಿ |
| ಕೊಯಮತ್ತೂರು | ಹೈದರಾಬಾದ್ | ಪಥಪರಿಯಮ್ |
| ಪಯಂಗಾಡಿ | ಕನ್ನೂರ್ ಟೌನ್ | ಕಲ್ಕತ್ತಾ |
| ಬೆಂಗಳೂರು | ಕೋಲ್ಕತ್ತಾ | ಬೆಂಗಳೂರು |
| ಕಾಲಿಕಟ್ | ಕಾಲಿಕಟ್ | ಕೇರಂಗ್ |
| ಕೋಲ್ಕತ್ತಾ | ಬೆಂಗಳೂರು | ಕಾಲಿಕಟ್ |
| ಯಾದಗಿರಿ | ಮಾಥೋಟ್ಟಮ್ | ಮೇಳ ಪಾಲಂ |

| **2022** |
|---|
| ಕೊಯಮತ್ತೂರು |
| ಖಾದಿಯಾನ್ |
| ಹೈದರಾಬಾದ್ |
| ಕರುಲಾಯಿ |
| ಪಥಪರೇಮ್ |
| ಕಾಲಿಕಟ್ |
| ಬೆಂಗಳೂರು |
| ಮೇಳ ಪಾಲಂ |
| ಕೋಲ್ಕತ್ತಾ |
| ಕೇರಂಗ್ |

ಹೀಗೆ ನಾವು ನೋಡಿದರೆ, ಕೇರಳ ರಾಜ್ಯದ ಜಮಾಅತ್ ಆಗಿರುವ ಕರುಲಾಯಿ 2013 ರಿಂದ ಸತತ ನಾಲ್ಕು ವರ್ಷಗಳ ಕಾಲ ಭಾರತದ ಜಮಾಅತ್‌ಗಳಲ್ಲಿ ಮೊದಲ ಸ್ಥಾನದಲ್ಲಿದೆ. ನಂತರ 2019ರಲ್ಲಿಯೂ ಪ್ರಥಮ ಸ್ಥಾನ ಗಳಿಸಿದ್ದರು. ಆದರೆ ಇಂದು ನಾಲ್ಕನೇ ಸ್ಥಾನದಲ್ಲಿದೆ. ಫಸ್ತಬಿಖುಲ್ ಖೈರಾತ್‌ನ ದೃಷ್ಟಿಯಿಂದ, ಅವರು ಈಗ ಭವಿಷ್ಯದಲ್ಲಿ ನಂಬರ್ ಒನ್ ಆಗಲು ಪ್ರಯತ್ನಿಸಬೇಕು. ಸತತ ನಾಲ್ಕು ವರ್ಷಗಳ ಕಾಲ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದ ಕ್ಯಾಲಿಕಟ್ ಜಮಾಅತ್ 2017 ರಲ್ಲಿ ಎಲ್ಲರನ್ನೂ ಹಿಂದಿಕ್ಕಿ ಮೊದಲ ಸ್ಥಾನವನ್ನು ಪಡೆದುಕೊಂಡಿತು. ಆದರೆ ನಂತರ ಐದು, ಎಂಟು ಮತ್ತು ಒಂಬತ್ತನೇ ಸ್ಥಾನಕ್ಕೆ ಏರಿತು ಮತ್ತು ಇಂದು ಅದು ಆರನೇ ಸ್ಥಾನದಲ್ಲಿದೆ. ಹಿಂದಿನ ಸ್ಥಾನವನ್ನು ಮರಳಿ ಪಡೆಯಲು ಸಹ ಪ್ರಯತ್ನಿಸಬೇಕು. ಹೈದರಾಬಾದಿನ ಜಮಾಅತ್ ಹೆಚ್ಚಿನ ಸಮಯದಿಂದ ಮೂರನೇ ಸ್ಥಾನವನ್ನು ಆಕ್ರಮಿಸಿಕೊಂಡಿದೆ ಮತ್ತು ಇಂದಿಗೂ ಈ ಸ್ಥಾನವನ್ನು ಉಳಿಸಿಕೊಂಡಿದೆ. ಆದಾಗ್ಯೂ, ಇದು ಮುಂದೆ ಅಗ್ರಸ್ಥಾನವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು ಮತ್ತು ಈ ಜಮಾಅತ್ ಹಾಗೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ ಎಂದು ನಾವು ನಂಬುತ್ತೇವೆ. ಖಾದಿಯಾನ್‌ಗೆ ಸಂಬಂಧಿಸಿದಂತೆ, ಇದು ಭಾರತದ ಎಲ್ಲಾ ಜಮಾಅತ್‌ಗಳಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ನಮಗೆ ಸಂತೋಷವಾಗಿದೆ. ಆದರೆ ಈ ಅರ್ಥದಲ್ಲಿ ಅದು ತನ್ನ ಮೊದಲ ಸ್ಥಾನವನ್ನು ಕಳೆದುಕೊಂಡಿರುವುದಕ್ಕೆ ನಾವು ವಿಷಾದಿಸುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಾಸಸ್ಥಾನ ಮತ್ತು ಶಾಶ್ವತ ಕೇಂದ್ರವಾಗಿ ಖಾದಿಯಾನ್ ಯಾವಾಗಲೂ ತನ್ನ ಮೊದಲ ಸ್ಥಾನವನ್ನು ಉಳಿಸಿಕೊಳ್ಳಬೇಕೆಂದು ನಾವು ಬಯಸುತ್ತೇವೆ. ಮತ್ತು ಇದು ತುಂಬಾ ಸುಲಭ ಏಕೆಂದರೆ ಇದು ಜನಸಂಖ್ಯೆ ಮತ್ತು ಸಂಖ್ಯೆಗಳ ದೃಷ್ಟಿಯಿಂದ ದೊಡ್ಡ ಜಮಾಅತ್ ಆಗಿದೆ, ಕೇವಲ ಗಮನ ಮತ್ತು ಸ್ಪರ್ಧೆ. ಉತ್ಸಾಹದ ಅಗತ್ಯವಿದೆ.

ಕೊಯಮತ್ತೂರು ಈ ವರ್ಷ ಮೊದಲ ಸ್ಥಾನವನ್ನು ಗಳಿಸಿದ್ದಕ್ಕಾಗಿ ಅಭಿನಂದನೆಗಳು, 2020 ರ ಮೊದಲ ಸ್ಥಾನವನ್ನು ಉಳಿಸಿಕೊಂಡಿದೆ

ಮತ್ತು ಈ ವರ್ಷವೂ ಖಾದಿಯಾನ್ ಅನ್ನು ಮೊದಲ ಸ್ಥಾನಕ್ಕೆ ಸೋಲಿಸಿದೆ, ಆದ್ದರಿಂದ ಕೊಯಮತ್ತೂರು ವಿಶೇಷ ಅಭಿನಂದನೆಗೆ ಅರ್ಹವಾಗಿದೆ. 2017 ರಿಂದ ಎರಡನೇ ಮೂರನೇ ನಾಲ್ಕನೇ ಮತ್ತು ಐದನೇ ಸ್ಥಾನದಲ್ಲಿದೆ ಮತ್ತು ಯಾವಾಗಲೂ ಮೊದಲ ಐದರಲ್ಲಿಯೇ ಉಳಿದಿದೆ ಎಂದು ಪಥಪೆರಿಯಮ್ ಜಮಾಅತ್ ಅನ್ನು ಉಲ್ಲೇಖಿಸುವುದು ಮುಖ್ಯವಾಗಿದೆ. ಅವರು ತನ್ನ ಎರಡನೇ ಮತ್ತು ಮೂರನೇ ಸ್ಥಾನವನ್ನು ಪಡೆಯಲು ಪ್ರಯತ್ನಿಸಬೇಕು.

ಎಲ್ಲ ಜಮಾಅತ್‌ಗಳು ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸಿದರೆ ಅದು ಅದ್ಭುತ ದೃಶ್ಯವಾಗಿರುತ್ತದೆ. ಅಲ್ಲಾಹನು ಪ್ರತಿ ಜಮಾಅತ್ತಿನೊಳಗೆ ಸ್ಪರ್ಧಾತ್ಮಕ ಮನೋಭಾವವನ್ನು ಸೃಷ್ಟಿಸಲಿ ಮತ್ತು ಪರಸ್ಪರ ಮುಂದೆ ಸಾಗಲು ಅವಕಾಶ ನೀಡಲಿ. ಆಮೀನ್. **(ಮನ್ಸೂರ್ ಅಹ್ಮದ್ ಮಸ್ರೂರ್)**

**ಪವಿತ್ರ ಖುರ್‌ಆನ್‌ನ ಇದು ಎಂತಹ ದೊಡ್ಡ ನೈತಿಕ ಗುಣವಾಗಿದೆ ಜಿಹಾದ್‌ಗೆ ಆದೇಶ ನೀಡುವ ಮೊದಲು, ಅವನು ಅದರ ಮಿತಿಗಳನ್ನು ವ್ಯಾಖ್ಯಾನಿಸಲು ಪ್ರಾರಂಭಿಸಿದ್ದಾನೆ ಇದರಿಂದ ಯಾವುದೇ ಅತಿಕ್ರಮಣದ ಸಾಧ್ಯತೆಯೇ ಇಲ್ಲ.**

**ಅಕ್ರಮ ದಾಳಿಗೆ ಪ್ರತಿಕ್ರಿಯೆ ಜಿಹಾದ್ ಆಗಿದೆ, ಆಕ್ರಮಣಕಾರಿ ದಾಳಿಯನ್ನು ಜಿಹಾದ್ ಎಂದು ಕರೆಯಲಾಗುವುದಿಲ್ಲ ಎಂದು 'ಉಖಾಬ್' ಪದದಿಂದ ಸೂಚಿಸಲಾಗಿದೆ.**

**ತಾಳ್ಮೆಯ ಫಲಿತಾಂಶವು ಉತ್ತಮವಾಗಿರುತ್ತದೆ, ಸೇಡು ತೀರಿಸಿಕೊಳ್ಳುವುದು ವ್ಯಕ್ತಿಯ ಕೋಪವನ್ನು ಮಾತ್ರ ತೆಗೆದುಹಾಕುತ್ತದೆ, ಆದರೆ ತಾಳ್ಮೆಯ ಸಂದರ್ಭದಲ್ಲಿ, ಅವನ ಆಧ್ಯಾತ್ಮಿಕತೆಯು ಅಭಿವೃದ್ಧಿಗೊಳ್ಳುತ್ತದೆ.**

ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಾ ಅಲ್-ನಹ್ಲ್ ಆಯತ್ 127 **ವಇನ್ ಆಖಬ್ತುಮ್ ಫಆಖಿಬೂ ಬಿಮಿಸ್ಲಿ ಮಾ ಊಖಿಬ್ತುಮ್ ಬಿಹೀ; ವಲಇನ್ ಸಬರ್‌ತುಮ್ ಲಹುವ ಖೈರುಲ್ಲಿಸ್ಸಾಬಿರೀನ್** (ಅಂದರೆ: ನೀವು ಪ್ರತಿಕಾರ ಮಾಡುವಿರಾದರೆ, ನಿಮ್ಮ ಮೇಲೆ ಉಂಟಾದ ಅಕ್ರಮಕ್ಕೆ ಸಮಾನವಾದಷ್ಟು ಮಾತ್ರ ಪ್ರತಿಕಾರ ಮಾಡಿರಿ. ಆದರೆ ನೀವು ಸಹನೆ ತೋರಿಸುವಿರಾದರೆ, ಸಹನಶೀಲರಿಗೆ ಅದು ಅತ್ಯುತ್ತಮವಾಗಿದೆ.) ನ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ:

ಈ ಆಯತ್‌ನ ಅರ್ಥವೇನೆಂದರೆ, ನಿಮ್ಮ ಶತ್ರುಗಳು ನೀವು ಬುದ್ಧಿವಂತಿಕೆಯಿಂದ ಮಾಡಿದ ಕರೆಗೆ ಕಿವಿಗೊಡುವುದಿಲ್ಲ ಬದಲಿಗೆ ನಿಮ್ಮನ್ನು ಕೊಲ್ಲಲು ತಮ್ಮ ಕತ್ತಿಗಳನ್ನು ಎತ್ತುತ್ತಾರೆ. ಹೀಗಾದಾಗ ನಿಮ್ಮ ರಕ್ಷಣೆಗೆ ಕತ್ತಿ ಹಿಡಿಯಲು ನಿಮಗೂ ಅವಕಾಶ ನೀಡಲಾಗುವುದು ಎಂದು ಹೇಳಲಾಗಿದೆ.

ಈ ಮಾತು ಎಷ್ಟು ಅದ್ಭುತವಾಗಿದೆ ಎಂದರೆ ರಸೂಲುಲ್ಲಾಹ್(ಸ) ಅವರು ಇನ್ನೂ ಮಕ್ಕಾದಲ್ಲಿಯೇ ಇದ್ದಾರೆ, ಯಹೂದಿಗಳೊಂದಿಗೆ ಅಥವಾ ಕ್ರಿಶ್ಚಿಯನ್ನರೊಂದಿಗೆ ಯಾವುದೇ ರೀತಿಯ ಚರ್ಚೆಗಳೂ ಪ್ರಾರಂಭವಾಗಿಲ್ಲ. ಆದರೆ ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ಅವರನ್ನು ಹಿಂಸಿಸುತ್ತಾರೆ ಮತ್ತು ದಬ್ಬಾಳಿಕೆ ಮಾಡುತ್ತಾರೆ ಆ ಸಮಯದಲ್ಲಿ ಅವರಿಗೆ ಆತ್ಮರಕ್ಷಣೆಗಾಗಿ ಅವರೊಂದಿಗೆ ಹೋರಾಡಲು ಅನುಮತಿಸಲಾಗುವುದು ಎಂದು ಮಕ್ಕಾದಲ್ಲಿ ಸುದ್ದಿ ನೀಡಲಾಯಿತು. ಹೌದು, ಈ ಸಲಹೆಯನ್ನು ನೆನಪಿಡಿ ಆತುರಪಡಬೇಡಿ ಮತ್ತು ಮೊದಲು ತಾಳ್ಮೆಯನ್ನು ತೋರಿಸಿ, ನಂತರ ಬೇರೆ ಆಯ್ಕೆಯಿಲ್ಲದಿದ್ದರೆ ಹೋರಾಡಿ. ರಸೂಲುಲ್ಲಾಹ್(ಸ) ಈ ಆದೇಶವನ್ನು ಸಂಪೂರ್ಣವಾಗಿ ಪೂರೈಸಿದರು ಮತ್ತು ದೀರ್ಘಕಾಲದವರೆಗೆ ಗ್ರಂಥ ಹೊಂದಿದ ಜನರ (ಎಹ್ಲೆ ಕಿತಾಬ್) ದಬ್ಬಾಳಿಕೆಯನ್ನು ಸಹಿಸಿಕೊಂಡರು ಮತ್ತು ಅಂತಿಮವಾಗಿ ನಿಸ್ಸಹಾಯಕರಾಗಿ ಅವರ ವಿರುದ್ಧ ಹೋರಾಡಲು ಮುಂದಾದರು.

ಜಿಹಾದ್‌ಗೆ ಆದೇಶ ನೀಡುವ ಮೊದಲು ಅಲ್ಲಾಹನು ಅದರ ಮಿತಿಗಳನ್ನು ವಿವರಿಸಲು ಪ್ರಾರಂಭಿಸಿದ್ದಾನೆ ಇದರಿಂದ ಯಾವುದೇ ಕ್ರಮೇಣದ ಸಾಧ್ಯತೆಯೇ ಇಲ್ಲ ಇದು ಪವಿತ್ರ ಖುರ್‌ಆನ್‌ನ ಒಂದು ದೊಡ್ಡ ನೈತಿಕ ಗುಣವಾಗಿದೆ.

ಉಖಾಬ್‌ನ ಪದದಲ್ಲಿ ಕಾನೂನುಬಾಹಿರ ದಾಳಿಯ ಪ್ರತಿಕ್ರಿಯೆಯನ್ನು ಜಿಹಾದ್ ಎಂದು ಕರೆಯಲಾಗುತ್ತದೆ, ಆಕ್ರಮಣಕಾರಿ ದಾಳಿಯನ್ನು ಜಿಹಾದ್ ಎಂದು ಕರೆಯಲಾಗುವುದಿಲ್ಲ ಏಕೆಂದರೆ ಉಖಾಬ್‌ನ ಪದವು ಇನ್ನೊಬ್ಬರ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಮಾಡುವ ಕ್ರಿಯೆಗೆ ಸಂಬಂಧಿಸಿದೆ. ಹಾಗಾಗಿ ಈ ಪದವು ಸೂಚಿಸುವುದು ಏನೆಂದರೆ, ನೀವು ಶಿಕ್ಷೆಯನ್ನು ನೀಡಿದಾಗ, ಅಪರಾಧ ಸಂಭವಿಸಿದ ನಂತರ ನೀಡಿ.

ಒಂದು ವೇಳೆ ಶಿಕ್ಷೆ ನೀಡಬೇಕಾದರೂ ಅದು ನಿನಗಾದ ನೋವಿಗಿಂತ ಹೆಚ್ಚಿಗೆ ಇರಬಾರದು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು **ಮಾಊಖಿಬ್ತುಮ್** ಪದದಲ್ಲಿ ಸೂಚನೆ ನೀಡಲಾಗಿದೆ.

**ಲಇನ್ ಸಬರ್ತುಮ್** ನಿಮ್ಮಲ್ಲಿ ತಾಳ್ಮೆಯನ್ನು ಪ್ರೋತ್ಸಾಹಿಸಿದರು ಮತ್ತು ಅದರ ಫಲಿತಾಂಶದ ವಿಷಯದಲ್ಲಿ ತಾಳ್ಮೆಯು ತುಂಬಾ ಮಹತ್ವದ್ದಾಗಿರುತ್ತದೆ ಎಂದು ಹೇಳಲಾಗಿದೆ.

ಉಹದ್ ಯುದ್ಧದಲ್ಲಿ, ಹ'ಝ್ರತ್ ಹಮ್ಝಾ(ರ) (ರಸೂಲುಲ್ಲಾಹ್(ಸ)ರವರ ಚಿಕ್ಕಪ್ಪ) ಮತ್ತು ಉಹದ್‌ನ ಶಹೀದ್‌ರೊಂದಿಗೆ ಅವಿಶ್ವಾಸಿಗಳು ಶಹೀದ್ ಆದವರ ಮೂಗು ಮತ್ತು ಕಿವಿಗಳನ್ನು ಸಹ ಕತ್ತರಿಸುವ ರೀತಿಯಲ್ಲಿ (ಅಂದರೆ ಮುಸಲ್ಲ ಮಾಡಿದರು) ನಡೆಸಿಕೊಂಡರು, ಆದರೆ ರಸೂಲುಲ್ಲಾಹ್(ಸ) ಅವರು ತಾಳ್ಮೆ ವಹಿಸಿದರು ಮತ್ತು ಅವಕಾಶ ಸಿಕ್ಕಾಗಲೂ ಅವರು ಈ ಕೊಳಕು ಮತ್ತು ಅವಮಾನಕರ ಆಚರಣೆಗೆ ಅನುಮತಿಸಲಿಲ್ಲ.

ಕೆಲವೊಮ್ಮೆ ಅವಿಶ್ವಾಸಿಯರು ಒಪ್ಪಂದಗಳನ್ನು ಮುರಿಯುತ್ತಿದ್ದರು. ಆದರೆ ರಸೂಲುಲುಲ್ಲಾಹ್(ಸ) ರವರು ತಾಳ್ಮೆಯಿಂದ ಇರುತ್ತಿದ್ದರು. ತಾಳ್ಮೆಯು ಉತ್ತಮ ಫಲಿತಾಂಶಗಳನ್ನು ತರುತ್ತದೆ. ಪ್ರತೀಕಾರವು ವ್ಯಕ್ತಿಯ ಕೋಪವನ್ನು ಮಾತ್ರ ತೆಗೆದುಹಾಕುತ್ತದೆ. ಆದರೆ ತಾಳ್ಮೆಯ ಸಂದರ್ಭದಲ್ಲಿ, ಅವನ ಆಧ್ಯಾತ್ಮಿಕತೆಯು ಬೆಳೆಯುತ್ತದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-274, ಪ್ರಕಟಿತ ಖಾದಿಯಾನ್ 2010)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್[ಅತಬಅ]ರವರ ಹೊಸ ಖುತ್ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

### *ವಿಶೇಷ ಸೂಚನೆ*

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ. ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 02 March 2023, Issue No. 09

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-08ರ ಉಳಿದ ಭಾಗ ಮುಂದುವರಿಸಲಾಗಿದೆ)*

ಇನ್ನೊರ್ವರು ಮೇಜರ್ ನಯೀಮ್ ಅಹ್ಮದ್ ಸಾಹಿಬ್ ಶಿಕಾಗೋದಿಂದ ಬಂದಿದ್ದರು. ಹೇಳಿದರು. ನಾವು ಈ ಮಸೀದಿಯನ್ನು ನಿರ್ಮಿಸಿದದೇವೆ. ಹುಝೂರ್ ಅನ್ವರ್(ಅಬಿಅ) ಈ ಮಸೀದಿಯ ನಿರ್ಮಾಣ ಕುರಿತು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಹೇಳಿದರು. ನೀವು ಅತ್ಯಂತ ಉತ್ತಮ ಮಸೀದಿಯನ್ನು ನಿರ್ಮಿಸಿದ್ದೀರಿ. ಅತಿಥಿಗೃಹ ಮತ್ತು ಮಸೀದಿ ನಿರ್ಮಾಣದಲ್ಲಿ ಯಾವ ಕೊರತೆಯೂ ಮಾಡಲಿಲ್ಲ.

ಹಾಫಿಝ್ ಅಲಿ ಅಸ್ಗರ್ ಸಾಹಿಬ್ ಅವರು ಲಾಸ್‌ಎಂಜಿಲೀಸ್‌ನಿಂದ 2046 ಮೀಲಿನಷ್ಟು ದೂರದ ಪ್ರಯಾಣ ಬೆಳೆಸಿ ಭೇಟಿಗಾಗಿ ಬಂದಿದ್ದರು. ಅವರು ಹೇಳಿದರು. ಹುಝೂರ್ ಅನ್ವರ್(ಅಬಿಅ) ನನಗೆ ಉಪದೇಶ ಮಾಡಿದರು. ಹೆಚ್ಚೆಚ್ಚು ಖುರ್‌ಆನ್ ಆಲಿಸುತ್ತೀರಿ ಮತ್ತು ಪಠಿಸುತ್ತೀರಿ ಎಂದು. ಅದರಿಂದ ನೆನಪಿನಶಕ್ತಿ ವೃದ್ಧಿಸುವುದು.

ಬಶಾರತ್ ಹಾರ್ಗೆ ಸಾಹಿಬ್ ತನ್ನ ಅನಿಸಿಕೆಗಳನ್ನು ತಿಳಿಸುತ್ತಾ ಹೇಳಿದರು. ನಾನು ಎಂಟು ವರ್ಷಗಳ ಮುಂಚೆ ಆಫ್ರಿಕಾದಿಂದ ಅಮೇರಿಕಾಕ್ಕೆ ಬಂದಿದ್ದೆ. ನಾನೂ ಸಹ ಮಸೀದಿ ನಿರ್ಮಾಣ ಕಾರ್ಯದಲ್ಲಿ ಸಹಾಯ ನೀಡಿರುತ್ತೇನೆ. ಹುಝೂರರ ಭೇಟಿ ಮಾಡಿ ನನಗೆ ತುಂಬಾ ಸಂತೋಷವಾಗಿದೆ, ನನ್ನ ಮನಸಸಿಗೆ ನೆಮ್ಮದಿ ದೊರೆತಿದೆ.

ಲಾಸ್ ಏಂಜಲಿಸ್‌ಯಿಂದ 2040 ಮೀಲಿನ ದೂರ ಪ್ರಯಾಣ ಬೆಳೆಸಿ ಭೇಟಿಗಾಗಿ ಬಂದ ಮಿತ್ರರೊಬ್ಬರು ಅಹ್ಮದ್ ಅಲಿ ಖಾಲಿದ್ ಸಾಹಿಬ್ ಭೇಟಿ ಮಾಡಿ ಹೊರಗೆ ಬಂದಾಗ ಅವರ ಕಣ್ಣುಗಳಿಂದ ಭಾಷ್ಪ ಸುರಿಯುತ್ತಿತ್ತು. ತುಂಬಾ ಭಾವುಕರಾಗಿದ್ದರು. ಹೇಳಿದರು. ನನ್ನ ಜೀವನದಲ್ಲಿ ಒಂದೇ ಆಸೆಯಿತ್ತು. ಅಲ್ಲಾಹನು ಇಂದು ಪೂರ್ಣಗೊಳಿಸಿದ್ದಾನೆ.

ಡೆಟ್ರಾಬುಟ್‌ನಿಂದ ಬಂದ ಮಿತ್ರರು ಬಶಾರತ್ ಅಹ್ಮದ್ ಸಾಹಿಬ್ ಹೇಳಿದರು. ನನ್ನ ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿ ನಾನು ಹೊಂದಿರುವುದಿಲ್ಲ ಇದು ನನ್ನ ಜೀವಿತದ ಮೊದಲ ಭೇಟಿಯಾಗಿತ್ತು. ಇಂದು ನಾನು ಹುಝೂರರ ದುಆ ಪಡೆದಿದ್ದೇನೆ. ತುಂಬಾ ಅದೃಷ್ಟವಂತ ನಾನು.

ಜಮಾಅತ್ ಶಿಕಾಗೋ (ಪೂರ್ವ) ಕ್ಕೆ ಸಂಬಂಧಿಸಿದ ಮಿತ್ರರು ನವೀದ್ ಸಾಹಿ ಸಾಹಿಬ್ ಹೇಳಿದರು. ಈ ಸಮಯ ನನ್ನ ಹೃದಯ ಭಾವನೆಗಳಿಂದ ತುಂಬಿ ಹೋಗಿದೆ. ನನ್ನ ಕುಟುಂಬ ಜೊತೆಗಿನ ಇದು ಮೊದಲ ಭೇಟಿಯಾಗಿತ್ತು. ನಾನು ಹೇಗೆ ವ್ಯವಹರಿಸಿದ್ದೇನೆ ತಿಳಿದಿಲ್ಲ. ನಾನು ತುಂಬಾ ಭಾವುಕನಾಗಿದ್ದೇನೆ. ವಿವರಿಸಲು ನನಗೆ ಸಾಧ್ಯವಿಲ್ಲ.

ತಾಹಿರ್ ಅಹ್ಮದ್ ಸಾಹಿಬ್ ಶಿಕಾಗೋ ಜಮಾಅತಿನವರು, ಭೇಟಿಯ ನಂತರ ತಮ್ಮ ಅನಿಸಿಕೆಗಳನ್ನು ವಿವರಿಸುತ್ತಾ ಹೇಳುತ್ತಾರೆ. ನಾವು ನಮ್ಮ ಇಮಾಮರ ಮುಂದೆ ಏನು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅದಾಗ್ಯೂ ಕೆಲವು ಪ್ರಶ್ನೆಗಳನ್ನು ಕೇಳಲು ಸಿದ್ಧತೆ ಮಾಡಿಕೊಂಡಿದ್ದೆನು. ಆದರೆ ಹುಝೂರ್ ಅನ್ವರ್(ಅಬಿಅ) ಮುಂದೆ ಬರುತ್ತಲೆ ಎಲ್ಲವು ಮರೆತು ಹೋಯಿತು. ನನ್ನ ಶರೀರ ಕಂಪಿಸುತಿತ್ತು. ನಾವು ಒಂದು ಬೇರೆಯೇ ಲೋಕದಲ್ಲಿದ್ದೆವು ಎಂಬನಿಸುತ್ತಿತ್ತು.

ಶಿಕಾಗೋವಿನ ಇನ್ನೊರ್ವ ಮಿತ್ರರು ಮುಹಮ್ಮದ್ ಝುಕರಿಯಾ ಸಾಹಿಬ್ ಹೇಳಿದರು. ನಾನು ಎಷ್ಟು ಭಾಗ್ಯವಂತನಾಗಿದ್ದೇನೆ. ಹುಝೂರ್ ಅನ್ವರ್(ಅಬಿಅ) ನನ್ನ ಮಗಳ ಶಿರದ ಮೇಲೆ ತಮ್ಮ ಹಸ್ತವನ್ನು ಸವರಿದರು ಮತ್ತು ಆಶೀರ್ವಾದ ನೀಡಿದರು. ನಾವು ಅನುಗ್ರಹಿತರಾದೆವು.

ಭೇಟಿಯ ಈ ಕಾರ್ಯಕ್ರಮಗಳು 1 ಗಂಟೆ 40 ನಿಮಿಷದವರೆಗೆ ನಡೆದವು. ನಂತರ ಹುಝೂರ್ ಅನ್ವರ್(ಅತಬಿಅ) ಮಸ್ಜಿದ್ ಫತಹ ಅಝೀಮ್ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಿಅ) ಹಿಒರಗೆ ಬಂದು ಸಸಿಯೊಂದನ್ನು ನೆಟ್ಟರು. ಅನಂತರ ಹುಝೂರ್ ಅನ್ವರ್(ಅತಬಿಅ) ತಮ್ಮ ವಸತಿಯತ್ತ ತೆರಳಿದರು.

### ಸಾಮೂಹಿಕ ಭೇಟಿಳು ಮತ್ತು ಅನಿಸಿಕೆಗಳು

ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಪುರುಷರ ಒಂದು ಗುಂಪು ಭೇಟಿಗಾಗಿ ಕಾದು ನಿಂತಿದ್ದರು. ಅದರ ಸಂಖ್ಯೆ 27 ಆಗಿತ್ತು. ಅವರುಗಳು ಸ್ಥಳೀಯ ಜಮಾಅತ್ ಝಿಯಾನ್ ಅಲ್ಲದೇ ಇತರ 14 ಜಮಾಅತುನವರು ಬಂದಿದ್ದರು. ಅವರಲ್ಲಿ ಕೆಲ ಮಿತ್ರರು ಕನ್‌ಟಕಿಯಿಮದ 452 ಮೈಲು ಜಾರ್ಜಿಯಾದಿಂದ 748 ಮೈಲು ಪ್ರಯಾಣ ಮಾಡಿ ಬಂದಿದ್ದರು. ಅದಾಗ್ಯೂ ಸ್ಯಾಟಲ್‌ನಿಂದ ಬಂದವರು 2014 ಮೈಲು ಮತ್ತು ಪೋರ್ಟ್‌ಲ್ಯಾಂಡಿನಿಂದ ಬಂದವರು 2087 ಮೈಲಿನಷ್ಟು ದೂರದ ಪ್ರಯಾಣ ಮಾಡಿ ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿ ಮಾಡಲು ಇಲ್ಲಿ ತಲುಪಿದ್ದರು. ಹುಝೂರ್ ಅನ್ವರ್(ಅತಬಿಅ) ಪ್ರೀತಿಪೂರ್ವಕವಗಿ ಎಲ್ಲರೊಡನೆ ಸರತಿಯ ಮೇರೆಗೆ ಭೇಟಿ ಮಾಡುತ್ತಾ ಅವರು ಪರಿಚಯ ಪಡೆದರು ಅವರಿಂದ ವಿಚಾರಿಸಿದರು. ನೀವು ಎಲ್ಲಿಂದ ಬಂದಿರುವಿರಿ ಎಂಬು ಬಂದಿರಿ. ಏನು ಕೆಲಸ ಮಾಡುತ್ತಿದ್ದೀರಿ. ಹುಝೂರ್ ಅನ್ವರ್(ಅತಬಿಅ) ಪ್ರತಿಯೊಬ್ಬರಿಂದ ಅವರ ಕುಶಲಕ್ಷೇಮವನ್ನು ವಿಚಾರಿಸಿಕೊಂಡರು. ವಿದ್ಯಾರ್ಥಿಗಳಿದ್ದವರನ್ನು ಹುಝೂರೆ ಪೆನ್ ನೀಡಿದರು. ತಂದೆಯ ಜೊತೆಯಲ್ಲಿ ಬಂದ ಸಣ್ಣ ವಯಸ್ಸಿನ ಮಕ್ಕಳಿಗೆ ಹುಝೂರ್ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ಚಾಕ್ಲೇಟ್ ನೀಡಿದರು.

ಗುಲ್ಫಾಮ್ ಅಶ್ರಫ್ ಸಾಹಿಬ್ ತಿಳಿಸಿದರು. ನನ್ನ ಸಂಬಂಧ ಗೋಜ್ರಾನ್ವಾಲದಿಂದಿದೆ, ಹುಝೂರರ ದರ್ಶನ ಪಡೆದು ನನ್ನ ನಯನಗಳು ತಂಪಾದವು ಅವರು ಹುಝೂರರ ಸೇವೆಯಲ್ಲಿ ನಿವೇದಿಸಿಕೊಇಂಡರು. ನಾನು ಕಂಪ್ಯೂಟರ್ ಸೈನ್ಸ್ ನಲ್ಲಿ ಡಿಗ್ರಿ ಮಾಡಿರುತ್ತೇನೆ. ಈಗ ಹುಝೂರರ ಜೊತೆ ಭೇಟಿಯಾಗಿದ್ದೇನೆಂದರೆ ಇನ್‌ಶಾಅಲ್ಲಾಹ್ ಈ ಭೇಟಿಯ ಅನುಗ್ರಹದಿಂದ ಕೆಲಸ ಸಹ ದೊರೆಯಬಹುದು. ನಂತರ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ ಹೇಳಿದರು. ನಾನು ಹುಝೂರರನ್ನು ಕಂಡು ತಮ್ಮ ವಿಶ್ವಾಸ ವೃದ್ಧಿಸಿಕೊಂಡಿದ್ದೇನೆ. ಹುಝೂರರ ಸಹವಾಸದಲ್ಲಿ ಕುಳಿತು ಹಝ್ರತ್ ರಸೂಲುಲ್ಲಾಹ್(ಸ) ಅವರ ಕಾಲ ನೆನಪಾಯಿತು ಹುಝೂರರ ಸಂಗಡ ಫಲವಾಗಿ ನನಗೆ ಇನ್ನಷ್ಟು ಧರ್ಮ ಸೇವೆ ಮಾಡುವ ಭಾವನೆ ಬೆಳೆದವು.

ಮಾನ್ಯ ಝಫರ್ ಸಲೀಮ್ ಸಹಿಬ್ ಅವರು ಮೌಲ್ವ ಜಮಾಅತಿನಿಂದ ಬಂದಿದ್ದರು. ಅವರ ಕಣ್ಣುಗಳಿಂದ ಭಾಷ್ಪಗಳು ಸುರಿಯುತ್ತಿತ್ತು ಹೇಳಿದರು ಖಲೀಫರು ನಮ್ಮವರಾಗಿದ್ದಾರೆ. ನಾವು ಅವರದ್ದಾಗಿದ್ದೇವೆ ಎಂದಿಷ್ಟು ಹೇಳಬಹುದು ಹುಝೂರ್ ಅನ್ವರ್(ಅತಬಿಅ) ಯಾವ ರೀತಿ ಪ್ರೀತಿಯಿಂದ ಮಾತನಾಡಿದ್ದಾರೆ. ಅದರಿಂದ ನಮ್ಮ ಮೇಲೆ ಖಲಿಫರ ನೆರಳಿದೆ ಎಂದು ಭಾಸವಾಗುತ್ತದೆ.

ಮಿಂಯಾ ಅನ್ವರ್ ಅಹ್ಮದ್ ಸಾಹಿಬ್ ಅವರು ಶಿಕಾಗೋ ಜಮಾಅತಿನಿಂದ ಬಂದಿದ್ದರು. ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇದು ಹುಝೂರರ ಜೊತೆ ನನ್ನ ಮೊದಲ ಭೇಟಿಯಾಗಿತ್ತು. ನಾನು ಹುಝೂರರ ಜೊತೆ ಮಾತನಾಡುವಾಗ ನನ್ನ ಕೈಗಳು ಕಂಪಿಸುತ್ತಿದ್ದವು. ನನ್ನ ಜೀವನದ ಅಭಿಲಾಷೆ ಇಂದು ಪೂರ್ಣಗೊಂಡಿದೆ.

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ**
**ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.